# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

## 89ನೇ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 2024ನೇ ಸಾಲಿನ 7ನೇ ಸಭೆಯ ನಡಾವಳಿಗಳು

**ದಿನಾಂಕ** : ಶುಕ್ರವಾರ, 06-12-2024

**ಸಮಯ** : ಪೂರ್ವಾಹ್ನ 11:00 ಘಂಟೆ

**ಸ್ಥಳ** : ಸಿಂಡಿಕೇಟ್ ಸಭಾಂಗಣ, ರಾಚವಿ, ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **89ನೇ ಸಾಮಾನ್ಯ ಸಿಂಡಿಕೇಟ್** ಹಾಗೂ **2024ನೇ ಸಾಲಿನ 7ನೇ ಸಭೆಯನ್ನು** ದಿನಾಂಕ 06 ಡಿಸೆಂಬರ್ 2024 ರಂದು ಪೂರ್ವಾಹ್ನ 11.00 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | | |
|---|---|---|
| 1. | ಪ್ರೊ. ಸಿ. ಎಂ. ತ್ಯಾಗರಾಜ | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಪ್ರೊ. ಎಸ್. ಬಿ. ಆಕಾಶ | ಸದಸ್ಯರು |
| 3. | ಶ್ರೀ ವಿನೀತ್ ವ. ಜೋಶಿ | ಸದಸ್ಯರು |
| 4. | ಶ್ರೀ ಈರಣ್ಣ ಬ. ಹಪ್ಪಳಿ | ಸದಸ್ಯರು |
| 5. | ಡಾ. ಎಸ್. ಬಿ. ಉಕಲಿ | ಸದಸ್ಯರು |
| 6. | ಡಾ. ಎಸ್. ಎ. ಪತಂಗಿ | ಸದಸ್ಯರು |
| 7. | ಪ್ರೊ. ಸಿದ್ಧಗೌಡ ಪಾಟೀಲ್ | ಸದಸ್ಯರು |
| 8. | ಡಾ. ಶಾರದಾಮಣಿ ಎಸ್ ಹುಣಶಾಳ | ಸದಸ್ಯರು |
| 9. | ಡಾ. ಕಾವೇರಿ ಎಚ್.ಎಂ. | ಸದಸ್ಯರು |
| 10. | ಶ್ರೀ. ರವೀಂದ್ರ ಎಂ. ನಾಯ್ಕರ್ | ಸದಸ್ಯರು |
| 11. | ಶ್ರೀ. ರಫೀ ಭಂಡಾರಿ | ಸದಸ್ಯರು |
| 12. | ಡಾ. ಮಾರುತಿ ಎಚ್. ಮುಂಡರಗಿ | ಸದಸ್ಯರು |
| 13. | ಶ್ರೀ. ಮಹಾಂತೇಶ ಕಂಬಾರ | ಸದಸ್ಯರು |
| 14. | ಡಾ. ಎಸ್.ಎಸ್. ಅಂಗಡಿ | ಸದಸ್ಯರು |
| 15. | ಶ್ರೀ ರವೀಂದ್ರನಾಥ ಕದಮ್, (ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 16. | ಶ್ರೀ. ಸಂತೋಷ ಕಾಮಗೌಡ (ಕೆ.ಎ.ಎಸ್.(ಹಿರಿಯ ಶ್ರೇಣಿ)) | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

## II. ಹಾಜರಾಗದ ಸದಸ್ಯರು:

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಂಗಳೂರು-ಪೂನಾ ರಾ.ಹೆ.-4, ಬೆಳಗಾವಿ-591156

## ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

**ವಿಷಯ:** ದಿನಾಂಕ 06 ಡಿಸೆಂಬರ್ 2024 ರಂದು ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ವಿಶ್ವವಿದ್ಯಾಲಯದ 89ನೇ ಹಾಗೂ 2024ನೇ ಸಾಲಿನ 7ನೇ ಸಾಮಾನ್ಯ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು.

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2).
2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 19.11.2024.
3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 19.11.2024.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 89ನೇ ಹಾಗೂ 2024 ನೇ ಸಾಲಿನ 7 ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು ದಿನಾಂಕ: 06.12.2024 ರಂದು ಪೂರ್ವಾಹ್ನ 11.00 ಗಂಟೆಗೆ ಸಿಂಡಿಕೇಟ್ ಸಭಾಂಗಣದಲ್ಲಿ ಆಯೋಜನೆ ಮಾಡಲಾಗಿತ್ತು. ಸಭೆಯಲ್ಲಿ ಹಾಜರಾದ ಅಧ್ಯಕ್ಷರು ಮತ್ತು ಎಲ್ಲ ಸದಸ್ಯರುಗಳನ್ನು ಕುಲಸಚಿವರು ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, 12 ನೇ ಘಟಿಕೋತ್ಸವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಇಂದು ಸಿಂಡಿಕೇಟ್ ಸಭೆಗೆ ನಾವೆಲ್ಲರೂ ಹಾಜರಾಗಿದ್ದು, ಇಂತಹ ಸಂತಸದ ಸಮಯದಲ್ಲಿ ವಿಶ್ವವಿದ್ಯಾಲಯದ ಎಂ.ಬಿ.ಎ. ವಿಭಾಗದ ಓರ್ವ ವಿದ್ಯಾರ್ಥಿ ಆಕಸ್ಮಿಕ ಮೃತ್ಯುವಿನಿಂದಾಗಿ ನೋವು ಕೂಡ ನಮ್ಮಲ್ಲಿ ಆವರಿಸಿದೆ. ಕಾರಣ, ಸದರಿ ವಿದ್ಯಾರ್ಥಿಯ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗೂ ಕುಟುಂಬ ವರ್ಗಕ್ಕೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಎರಡು ನಿಮಿಷಗಳ ಮೌನ ಆಚರಣೆಗೆ ಕರೆ ನೀಡಿದರು ಹಾಗೂ ಈ ವಿದ್ಯಾರ್ಥಿಯು ಬಡಕುಟುಂಬದವನಾಗಿದ್ದು, ವೈದ್ಯಕೀಯ ವೆಚ್ಚವನ್ನು ವಿಶ್ವವಿದ್ಯಾಲಯದಿಂದ ಭರಿಸುವ ಕುರಿತು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದ ಹಿನ್ನೆಲೆಯಲ್ಲಿ ಸಭೆಯು ಅನುಮೋದನೆ ನೀಡಿತು. ಇಂದು ಮಹಾಪರಿನಿರ್ವಾಣ ದಿನ ಕೂಡ ಆಗಿರುವುದರಿಂದ ಸಂವಿಧಾನ ಪೀಠಿಕೆಯನ್ನು ಬೋಧಿಸಿರುವುದರ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

**ಸಿಂಡಿಕೇಟ್ ಸದಸ್ಯರುಗಳು ಪ್ರಸ್ತಾಪಿಸಿದ ವಿಷಯಗಳು:**

**ಡಾ. ಹೆಚ್. ಕಾವೇರಿ:-**

- ವಿದ್ಯಾರ್ಥಿ ನಿಧನ ಹೊಂದಿದ ಸ್ಥಳವು ಅಷ್ಟಾಗಿ ಎತ್ತರವಾಗಿರುವುದಿಲ್ಲ, ಕಾಡು ಮತ್ತು ಪಕ್ಕದಲ್ಲಿ ಸ್ಲಾಬ್ ಕೂಡ ಇರುತ್ತದೆ. ಒಂದು ವೇಳೆ ವಿದ್ಯಾರ್ಥಿಯು ಸ್ಲಾಬ್ ಮೇಲೆ ಬಿದ್ದಿದ್ದರೇ ರಕ್ತಸ್ರಾವ ಆಗಬೇಕಾಗಿತ್ತು. ಆದರೆ ರಕ್ತಸ್ರಾವ ಕಂಡು ಬಂದಿರುವುದಿಲ್ಲ. ವಿಚಾರಿಸಿದಾಗ ಮಳೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಕಾರಣ, ಈ ಪ್ರಕರಣವನ್ನು ಪರಿಶೀಲಿಸಲು ಮನವಿ ಮಾಡಿದರು.
- ವಸತಿನಿಲಯಯಲ್ಲಿ Full time Watchman/Care taker ಇರುವುದಿಲ್ಲ. ಸಂಜೆಯಾದರೇ ವಿದ್ಯಾರ್ಥಿಗಳದೇ ಸಾಮ್ರಾಜ್ಯವಾಗಿರುತ್ತದೆ. ಕಾರಣ, ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ಓರ್ವ Full time Watchman/Care taker ನೇಮಿಸುವುದು ಸೂಕ್ತ.
- ವಸತಿನಿಲಯದ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕವು ರೂ.10,000/- ರಿಂದ 15,000/-ಕ್ಕೆ ಏರಿಸಲಾಗಿದೆ. ಮೆಸ್ ಬಿಲ್ ರೂ.3000/- ಇರುತ್ತದೆ. ವಿದ್ಯಾರ್ಥಿಗಳು ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಾಗಿದ್ದು, ದುಬಾರಿ ವೆಚ್ಚ ಭರಿಸಬೇಕಾಗಿದೆ. ವಸತಿನಿಲಯದಲ್ಲಿ ನೀಡುತ್ತಿರುವ ಊಟದ ಗುಣಮಟ್ಟವು ಚೆನ್ನಾಗಿರುವುದಿಲ್ಲ.

- ❖ ವಿದ್ಯಾರ್ಥಿನಿಯರು ಮತ್ತು ಮಹಿಳಾ ಸಿಬ್ಬಂದಿಗಳಿಗೆ ಪ್ರಸ್ತುತ ಎರಡು ಶೌಚಾಲಯಗಳಿದ್ದು, ಹೆಚ್ಚು ಸಂಖ್ಯೆಯ ಶೌಚಾಲಯದ ವ್ಯವಸ್ಥೆ ಮಾಡುವುದು.
- ❖ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಪ್ರಸ್ತುತ 21 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದು, ಗುಣಮಟ್ಟದ ಬೋಧನೆಗೆ Update version system ನೀಡುವುದು.
- ❖ Student Welfare Committee, SC/ST Griveance Cell ರಚಿಸುವುದು.

**ಶ್ರೀ ಮಹಾಂತೇಶ ಕಂಬಾರ:**

- ❖ ವಿಶ್ವವಿದ್ಯಾಲಯದಲ್ಲಿ ಜರುಗುವ ಪ್ರತಿಯೊಂದು ಕಾರ್ಯಕ್ರಮವನ್ನು "ಸಂವಿಧಾನ ಪೀಠಿಕೆ" ಓದುವುದರ ಮುಖಾಂತರ ಪ್ರಾರಂಭಿಸುವುದು. ಇದರಿಂದ ವಿದ್ಯಾರ್ಥಿಗಳಲ್ಲಿ ಸಂವಿಧಾನ ಕುರಿತಾಗಿ ಅರಿವು ಮೂಡಿಸಲು ಸಹಕಾರಿಯಾಗುತ್ತದೆ.
- ❖ ವಿಶ್ವವಿದ್ಯಾಲಯದಲ್ಲಿ ಜರುಗುವ ಎಲ್ಲ ಕಾರ್ಯಕ್ರಮಗಳ ಕುರಿತಾಗಿ ಸಿಂಡಿಕೇಟ್ ಸದಸ್ಯರುಗಳಿಗೆ ಮಾಹಿತಿ ನೀಡುವುದು ಹಾಗೂ ಆಹ್ವಾನಿಸುವುದು.
- ❖ ವಿಶ್ವವಿದ್ಯಾಲಯದಲ್ಲಿ ರಚನೆಯಾಗುವ ಸಮಿತಿಗಳಲ್ಲಿ Executive Body ಯಾಗಿರುವ ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳು ಇವರುಗಳನ್ನು ಸಮಿತಿಗಳ ಅಧ್ಯಕ್ಷರನ್ನಾಗಿ ನೇಮಿಸದೇ ಇರುವುದು. ಸಮಿತಿಗಳನ್ನು ಸಿಂಡಿಕೇಟ್ ಸದಸ್ಯರುಗಳನ್ನು ಅಧ್ಯಕ್ಷರಾಗಿ ನೇಮಿಸುವುದು ಮತ್ತು ವಿವಿಧ ಸಮಿತಿಗಳಲ್ಲಿ ಒಂದು ವರ್ಷದ ಅವಧಿಗೆ ಸರದಿ ಪ್ರಕಾರ ಸಿಂಡಿಕೇಟ್ ಸದಸ್ಯರುಗಳಿಗೆ ಅವಕಾಶ ಕಲ್ಪಿಸುವುದು.

**ಶ್ರೀ ರಫೀಕ ಭಂಡಾರಿ:**

- ❖ ವಿಶ್ವವಿದ್ಯಾಲಯದ ಪ್ರತಿಯೊಂದು ಸುತ್ತೋಲೆಗಳು, ಅಧಿಸೂಚನೆ, ಪರಿನಿಯಮಗಳು(Circular, Notification, Statute, Ordinance) ಹಾಗೂ ಸರ್ಕಾರದ ಆದೇಶಗಳು, ಮಹತ್ವದ ಕಾಗದ ಪತ್ರಗಳ ಕುರಿತಾಗಿ ಸದಸ್ಯರುಗಳಿಗೆ ಮಾಹಿತಿ ನೀಡುವುದು.
- ❖ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಇವರ ಸ್ಮರಣಾರ್ಥ ನವೆಂಬರ್ ತಿಂಗಳಿನಲ್ಲಿ "National Education Day" ಕಡ್ಡಾಯವಾಗಿ ಆಚರಿಸುವುದು.
- ❖ ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿಗಳ ನಡುವೆ ಭಯದ ವಾತಾವರಣ ಇರುವುದು ಕಂಡು ಬಂದಿದ್ದು, ಎಲ್ಲ ಸಿಬ್ಬಂದಿಗಳು, ಅಧಿಕಾರಿಗಳು ಮತ್ತು ಸಿಂಡಿಕೇಟ್ ಸದಸ್ಯರುಗಳ ನಡುವೆ Cardial Relation ವಾತಾವರಣ ನಿರ್ಮಿಸಲು ಸಹಕರಿಸುವುದು.

**ಸದಸ್ಯರುಗಳು ಪ್ರಸ್ತಾಪಿಸಿದ ವಿಷಯಗಳಿಗೆ ಕುಲಸಚಿವರು ಮತ್ತು ಕುಲಪತಿಗಳು ಈ ಕೆಳಕಾಣಿಸಿದಂತೆ ಸ್ಪಷ್ಟನೆ ನೀಡಿದರು.**

- ❖ ಎಂ.ಬಿ.ಎ. ವಿಭಾಗದ ವಿದ್ಯಾರ್ಥಿಯ ನಿಧನ ಪ್ರಕರಣದ ಬಗ್ಗೆ ಕಾಕತಿ ಪೊಲೀಸ್ ಠಾಣೆಯಲ್ಲಿ ಎಂ.ಎಲ್.ಸಿ. ಆಗಿರುವ ಮಾಹಿತಿ ಇದ್ದು, ಪ್ರಕರಣದ ಬಗ್ಗೆ ಮಾಹಿತಿ ಪಡೆಯಲಾಗುವುದು.
- ❖ ವಿಶ್ವವಿದ್ಯಾಲಯ ಪ್ರಾರಂಭದಿಂದಲೂ ವಸತಿನಿಲಯದಲ್ಲಿ ಓರ್ವ ಬೋಧಕ ಸಿಬ್ಬಂದಿಯನ್ನು ನಿಲಯಪಾಲಕರಾಗಿ ನೇಮಕ ಮಾಡುವ ಪ್ರಕ್ರಿಯೆ ಚಾಲ್ತಿ ಇರುತ್ತದೆ. ಹಿಂದಿನಿಂದಲೂ ಇಂತಹ(ವಿದ್ಯಾರ್ಥಿಗಳ ನಿಧನ) ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ. ಕಾರಣ, ಮುಂದಿನ ದಿನಗಳಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿನಿಲಯಕ್ಕೆ Full time Watchman/Care taker ನೇಮಿಸಲು ಕ್ರಮ ಕೈಗೊಳ್ಳಲಾಗುವುದು.

- "Annual Maitanance Charge" ಸಲುವಾಗಿ ವಸತಿನಿಲಯದ ವಿದ್ಯಾರ್ಥಿಗಳಿಂದ(OBC) ಪ್ರವೇಶಾತಿ ಶುಲ್ಕಗಳಲ್ಲಿ ಭರಿಸಿಕೊಳ್ಳಲಾಗುತ್ತಿದೆ. ಮುಂದುವರೆದು, ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಮೆಸ್ ಬಿಲ್‌ನಲ್ಲಿ ವಿನಾಯಿತಿ ಇರುತ್ತದೆ.
- ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ 21 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಆದರೆ, ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ದಿನನಿತ್ಯ ನಡೆಯುವ ತರಗತಿಗಳಿಗೆ ಹಾಜರಾಗುವುದಿಲ್ಲ. ಸದರಿ ವಿಭಾಗದಲ್ಲಿ ಯಾವುದೇ ಖಾಯಂ ಬೋಧಕ ಸಿಬ್ಬಂದಿ ನೇಮಕವಾಗಿರುವುದಿಲ್ಲ. ಅತಿಥಿ ಉಪನ್ಯಾಸಕರಿಂದ ವಿಭಾಗದ ತರಗತಿಗಳನ್ನು ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಇಲ್ಲಿಗೆ ಸದರಿ ವಿಭಾಗವನ್ನು ಸ್ಥಳಾಂತರಿಸಿ, ಸದರಿ ವಿಭಾಗಕ್ಕೆ ವಿಜಯವಾಣಿ/ಪ್ರಜಾವಾಣಿ ಪತ್ರಿಕೆಗಳಲ್ಲಿನ ನುರಿತ ತಜ್ಞರನ್ನು ಬೋಧಕರನ್ನಾಗಿ ನೇಮಕ ಮಾಡಲಾಗುವುದು.
- "National Education Day" 2025 ರಿಂದ ಆಚರಿಸಲಾಗುವುದು.
- ವಿಶ್ವವಿದ್ಯಾಲಯದ ಪ್ರತಿಯೊಂದು ಸುತ್ತೋಲೆಗಳು, ಅಧಿಸೂಚನೆ, ಪರಿನಿಯಮಗಳು(Circular, Notification, Statute, Ordinance) ಕುರಿತಾದ ಮಾಹಿತಿಯನ್ನು ಸದಸ್ಯರುಗಳಿಗೆ ಕಳುಹಿಸಲಾಗುವುದು ಹಾಗೂ ಸದಸ್ಯರುಗಳು ಕಛೇರಿಗೆ ಭೇಟಿ ನೀಡಿ ಕಡತಗಳನ್ನು ಪರಿಶೀಲಿಸಲು ಅವಕಾಶ ಕಲ್ಪಿಸಲಾಗುವುದು.
- ವಿಶ್ವವಿದ್ಯಾಲಯದ ಅಧಿಕಾರಿಗಳು ಕೆ.ಸಿ.ಎಸ್.ಆರ್., ಕರ್ನಾಟಕ ರಾಜ್ಯ ಅಧಿನಿಯಮ-2000 ಹಾಗೂ ಸರ್ಕಾರದ ನಿಯಮಾವಳಿಗಳನ್ನು ಅನುಸರಿಸುತ್ತಾ ಕಾರ್ಯನಿರ್ವಹಿಸುತ್ತಿದ್ದು ಯಾವುದೇ Role of Conflict ಉದ್ಭವಿಸುವುದಿಲ್ಲ.
- ಪ್ರಸ್ತುತ ಸ್ಥಳದ ಅಭಾವದಿಂದಾಗಿ ಶೌಚಾಲಯಗಳ ಸಮಸ್ಯೆ ಇದ್ದು, ಹಿರೇಬಾಗೇವಾಡಿ-ಹಾಲಗಿಮರ್ಡಿ ಗ್ರಾಮದಲ್ಲಿ ಹೊಸ ಕಟ್ಟಡ ನಿರ್ಮಾಣವಾಗುತ್ತಿರುವುದರಿಂದ ಶೌಚಾಲಯಗಳ ಸಮಸ್ಯೆಗೆ ಪರಿಹಾರ ದೊರಕಲಿದೆ.

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 89 ನೇ ಹಾಗೂ 2024 ನೇ ಸಾಲಿನ 7 ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 06-12-2024 ರಂದು ಕೈಗೊಂಡ ತೀರ್ಮಾನಗಳು.**

| | **ಸಂಖ್ಯೆ** | **ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು** |
|---|---|---|
| 01 | 2024/12/01 | ಹಿಂದಿನ ಸಭೆಗಳ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ದೃಢೀಕರಣಕ್ಕಾಗಿ ಸಭೆಯ ಮುಂದಿಡುವುದು. |
| ತೀರ್ಮಾನ | | **ದಿನಾಂಕ 11.09.2024 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿ ಅನುಮೋದನೆ ನೀಡಿತು.** |
| 02 | 2024/12/02 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಧ್ಯಾಪಕರುಗಳ ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ಹಂತ 11 ರಿಂದ 12, ಹಂತ 12 ರಿಂದ 13A ಸಹ-ಪ್ರಾಧ್ಯಾಪಕರ ಹಂತ ಹಾಗೂ ಹಂತ 14 ರಿಂದ 15 ಹಿರಿಯ ಪ್ರಾಧ್ಯಾಪಕರ ಹಂತದ ಪದೋನ್ನತಿಯ ಕುರಿತು. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕರುಗಳ, ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ಹಂತ 11 ರಿಂದ 12, ಹಂತ 12 ರಿಂದ 13A ಸಹ-ಪ್ರಾಧ್ಯಾಪಕರ ಹಂತ ಹಾಗೂ ಹಂತ 14 ರಿಂದ 15 ಹಿರಿಯ ಪ್ರಾಧ್ಯಾಪಕರ ಹಂತದ ವೃತ್ತಿ ಪದೋನ್ನತಿಗೆ ಸಂಬಂಧಿಸಿದಂತೆ ತಜ್ಞರನ್ನು ಒಳಗೊಂಡ Board of Appointment (BoA) ಸಮಿತಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು ಹಾಗೂ ಈ ಕೆಳಕಾಣಿಸಿದಂತೆ ಪದೋನ್ನತಿ ನೀಡಲು ಶಿಫಾರಸ್ಸು ಮಾಡಿತು.** |

| Sl No | Name of the Faculty | Departments | Academic Level |
|---|---|---|---|
| 01 | Prof. D. N. Patil | Economics | Professor (Academic Level 14) to **Senior Professor** (Academic Level 15) |
| 02 | Dr. Nandini G. Devarmani | Criminology and Criminal Justice | Assistant Professor (Selection Grade/Academic Level 12) to **Associate Professor** (Academic Level 13A) |
| 03 | Dr. Mahesh Gajappanavar | Kannada | Assistant Professor (Selection Grade/Academic Level 12) to **Associate Professor** (Academic Level 13A) |
| 04 | Dr. Adinath Upadhya | Mathematics | Assistant Professor (Selection Grade/Academic Level 12) to **Associate Professor** (Academic Level 13A) |
| 05 | Dr. Jagadish S. Gasti | Physical Education | Selection Grade/Academic Level 12 to **College Director** (Academic Level 13A) |
| 06 | Dr.Chandrashekar S. V. | Criminology and Criminal Justice. | Assistant Professor (Senior Scale/Academic Level 11) to **Assistant Professor** (Selection Grade/Academic Level 12) |

| | | |
|---|---|---|
| 03 | 2024/12/03 | ಪ್ರೊ. ಶಿವಾನಂದ ಗೋರನಾಳೆ, ಪ್ರಾಧ್ಯಾಪಕರು, ಗಣಕವಿಜ್ಞಾನ ವಿಭಾಗ ಇವರಿಗೆ ಇಲ್ಲಿ ಜರುಗುವ ಕಾರ್ಯಾಗಾರದಲ್ಲಿ ಭಾಗವಹಿಸಲು ಅನುಮತಿ ನೀಡಿರುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಹಾಗೂ INTI International University, Malayasia ಇವರುಗಳ ಜೊತೆ MoU ಮಾಡಿಕೊಂಡಿದ್ದರಿಂದ ವಿಶ್ವವಿದ್ಯಾಲಯದ ಗಣಕ ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಶಿವಾನಂದ ಗೊರನಾಳೆ ಇವರಿಗೆ ದಿನಾಂಕ: **09.12.2024** ರಿಂದ **15.12.2024** ರವರೆಗೆ ಪ್ರಯಾಣ ದಿನಗಳನ್ನು ಒಳಗೊಂಡಂತೆ ಒಟ್ಟು **07** ದಿನಗಳ ಕಾಲ ವಿಶ್ವವಿದ್ಯಾಲಯದಿಂದ ಯಾವುದೇ ಹಣಕಾಸಿನ ನೆರವು ನೀಡದೇ INTI International University, Malayasia ಇಲ್ಲಿ ಜರುಗುವ ಕಾರ್ಯಾಗಾರದಲ್ಲಿ ಭಾಗವಹಿಸಲು ಅನುಮತಿ ನೀಡಲಾಗಿದೆ. ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು. |
| 04 | 2024/12/04 | ಶ್ರೀ ಮಾರುತೇಶ ಎಮ್ ಹಳ್ಳಿಗುಡಿ, ಗಣಕಯಂತ್ರ ನಿರ್ವಾಹಕರು ಇವರನ್ನು ಸೇವೆಯಿಂದ ಅಮಾನತ್ತು ಮಾಡಿದ ಕುರಿತು. |
| ತೀರ್ಮಾನ | | ಶ್ರೀ ಮಾರುತೇಶ ಎಮ್ ಹಳ್ಳಿಗುಡಿ ಇವರು ಗಣಕಯಂತ್ರ ನಿರ್ವಾಹಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಇವರ ಕಾರ್ಯವೈಖರಿಗಳ ಕುರಿತು ದೂರು ಬಂದಿದ್ದರಿಂದ ಹಿಂದಿನ ಕುಲಸಚಿವರು ಸದರಿ ಸಿಬ್ಬಂದಿಗೆ ಕಂಪ್ಯೂಟರ್ ಟೆಸ್ಟ್ ತೆಗೆದುಕೊಂಡಿದ್ದು, ಅದರಲ್ಲಿ ಹಲವಾರು ಕಾಗುಣಿತ ದೋಷಗಳು ಕಂಡು ಬಂದಿರುತ್ತವೆ. ತದನಂತರ ಆಡಳಿತ ಹಿತದೃಷ್ಠಿಯಿಂದ ಸದರಿ ಸಿಬ್ಬಂದಿಯನ್ನು ಕನ್ನಡ ಭಾಷಾ ಅಧ್ಯಯನ ಸಂಸ್ಥೆಯಲ್ಲಿ ವರ್ಗಾಯಿಸಲಾಗಿತ್ತು. ನಂತರ ಕನ್ನಡ ವಿಭಾಗದ ಮುಖ್ಯಸ್ಥರು ಸದರಿ ಸಿಬ್ಬಂದಿಗೆ ಆಡಳಿತಾತ್ಮಕ ಮಾಹಿತಿ ಅಥವಾ ಪತ್ರ ವ್ಯವಹಾರದ ಬಗ್ಗೆ ಯಾವುದೇ ತಿಳುವಳಿಕೆ ಇರುವುದಿಲ್ಲ. ಕನ್ನಡ, ಇಂಗ್ಲೀಷ ಟೈಪಿಂಗ್ ತುಂಬಾ ನಿಧಾನವಿದೆ ಮತ್ತು ಅತಿಯಾದ ಕಾಗುಣಿತ ದೋಷವಿರುತ್ತದೆ ಎಂದು ದೂರು ನೀಡಿದ್ದರು. ಕಾರಣ, ಶ್ರೀ ಮಾರುತೇಶ ಎಮ್ ಹಳ್ಳಿಗುಡಿ ಇವರಿಗೆ ಎರಡನೇ ಬಾರಿ ಕನ್ನಡ, ಇಂಗ್ಲೀಷ ಟೈಪಿಂಗ್ ಟೆಸ್ಟ್ ತೆಗೆದುಕೊಂಡಿದ್ದು, ಅದರಲ್ಲೂ ಹಲವಾರು ದೋಷಗಳು ಕಂಡು ಬಂದಿದ್ದರಿಂದ ಸದರಿ ಸಿಬ್ಬಂದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅಮಾನತ್ತು ಮಾಡಲಾಗಿರುವ ವಿಷಯವನ್ನು ಸಭೆಗೆ ಕುಲಸಚಿವರು ವಿವರಿಸಿದರು. |

| | | |
|---|---|---|
| | ಪ್ರೊ. ಎಸ್.ಬಿ. ಆಕಾಶ ಇವರು ಅಮಾನತ್ತಿನ ಬದಲಾಗಿ ತಿಳುವಳಿಕೆ ಪತ್ರ ನೀಡಿ ಸಿಬ್ಬಂದಿಗೆ ಸುಧಾರಣೆ ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದು ಒಳ್ಳೆಯದು ಎಂದರು ಹಾಗೂ ಇನ್ನಿತರ ಸದಸ್ಯರುಗಳು ಕೂಡ ಕಾಗುಣಿತ ದೋಷಗಳು ಕಂಡು ಬಂದಿದ್ದರಿಂದ ಅಮಾನತ್ತು ಮಾಡಿರುವುದು ಸರಿ ಅಲ್ಲ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಕುಲಸಚಿವರು ಅಮಾನತ್ತಿನ ನಂತರ ಸದರಿ ಸಿಬ್ಬಂದಿಯು ಗಣಕಯಂತ್ರ ತರಬೇತಿ ಸೇರಿ, ಜ್ಞಾನ ಪಡೆದು ಕನ್ನಡ, ಇಂಗ್ಲೀಷ ಟೈಪಿಂಗನಲ್ಲಿ ಸುಧಾರಣೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿರುತ್ತದೆ ಮತ್ತು ಈಗಾಗಲೇ ಸದರಿ ಅಮಾನತ್ತು ಆದೇಶವನ್ನು ರದ್ದುಪಡಿಸಲಾಗಿದೆ ಎಂದು ತಿಳಿಸಿದ ಹಿನ್ನೆಲೆಯಲ್ಲಿ, ಶ್ರೀ ಮಾರುತೇಶ ಹಳ್ಳಿಗುಡಿ ಇವರಿಗೆ ಜಾರಿ ಮಾಡಲಾದ ಅಮಾನತ್ತು ಆದೇಶ ಮತ್ತು ರದ್ದುಪಡಿಸಿದ ಆದೇಶದ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು ಹಾಗೂ ಮುಂದಿನ ದಿನಗಳಲ್ಲಿ ಯಾವುದೇ ಸಿಬ್ಬಂದಿಯನ್ನು ಅಮಾನತ್ತುಗೊಳಿಸುವ ಪೂರ್ವದಲ್ಲಿ ಸಿಂಡಿಕೇಟ್ ಉಪ ಸಮಿತಿ ರಚಿಸಿ, ಸಮಿತಿ ವರದಿ ಆಧಾರಿಸಿ ಕ್ರಮ ಕೈಗೊಳ್ಳಲು ಸಭೆಯು ಸೂಚಿಸಿತು. |
| 05 | 2024/12/05 | 2024-25ನೇ ಶೈಕ್ಷಣಿಕ ಸಾಲಿನ ಸ್ನಾತಕ ವಿಷಯಗಳಿಗೆ ತಾತ್ಕಾಲಿಕ ಪೂರ್ಣಕಾಲಿಕ ಮತ್ತು ಅರೆಕಾಲಿಕ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿರುವ ಕುರಿತು. |
| ತೀರ್ಮಾನ | | **2024-25** ನೇ ಸಾಲಿಗೆ ಸ್ನಾತಕ ವಿಷಯಗಳಿಗೆ ಹೆಚ್ಚುವರಿ ಬೋಧನಾ ಕಾರ್ಯಭಾರದ ಅಗತ್ಯಗಳಿಗೆ ಅನುಗುಣವಾಗಿ **15** ತಾತ್ಕಾಲಿಕ ಅತಿಥಿ ಉಪನ್ಯಾಸಕರನ್ನು ಯುಜಿಸಿ ಹಾಗೂ ರಾಜ್ಯ ಸರ್ಕಾರದ ನಿಯಮಾವಳಿ ಪ್ರಕಾರ ಆಯ್ಕೆ ಮಾಡಲಾಗಿದೆ. ಸದರಿ ಆಯ್ಕೆ ಪಟ್ಟಿಯನ್ನು ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು ಹಾಗೂ ಆಯ್ಕೆಗೊಂಡ ತಾತ್ಕಾಲಿಕ ಅತಿಥಿ ಉಪನ್ಯಾಕರಗಳಿಗೆ ನಿಯಮಾನುಸಾರ ಗೌರವಧನವನ್ನು ಹಂಚಿಕೆ ಮಾಡಲು ಅನುಮೋದನೆ ನೀಡಿತು. |
| 06 | 2024/12/06 | ಡಾ. ಪಿ. ನಾಗರಾಜ, ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಲು ಸರ್ಕಾರದಿಂದ ಪತ್ರ ಬಂದಿರುವ ಕುರಿತು. |
| ತೀರ್ಮಾನ | | ಡಾ. ಪಿ. ನಾಗರಾಜ, ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-**2000** ಪ್ರಕರಣ **58** ರಲ್ಲಿನ ಉಪಬಂಧಗಳನ್ವಯ ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವ ವಿಷಯದ ಕುರಿತು ಚರ್ಚಿಸಿದ ಸಭೆಯು, ಸದರಿ ಸಿಬ್ಬಂದಿಯು ಸುಮಾರು **12** ವರ್ಷದಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಮೂಲತಃ ಬೆಂಗಳೂರು ನಿವಾಸಿಯಾಗಿರುತ್ತಾರೆ. ಪ್ರಸ್ತುತ ಕುಟುಂಬಕ್ಕೆ ಅವರ ಅವಶ್ಯಕತೆ ಇರುವುದರಿಂದ(Genuine Reason) ಸದರಿಯವರನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಹುದ್ದೆರಹಿತವಾಗಿ ಕಳುಹಿಸಲು ಒಪ್ಪಿಗೆ ಸೂಚಿಸಿತು. ಮುಂದುವರೆದು, ವರ್ಗಾವಣೆ ಬಯಸುವ ವಿಶ್ವವಿದ್ಯಾಲಯದಿಂದ ಸಿಬ್ಬಂದಿಯು ಮೊದಲು ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆದ ನಂತರ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ NoC ನೀಡಲು ಸಭೆ ತೀರ್ಮಾನಿಸಿತು.<br>ದಿನಾಂಕ:**20.06.2023** ರ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಲ್ಲಿ ಸ್ಥಳಕ್ಕೆ ಬದಲಿ(Replace/substitute) ಸಿಬ್ಬಂದಿಯನ್ನು ನೀಡುವ ವಿಷಯದಲ್ಲಿ ತಿದ್ದುಪಡಿ ಮಾಡಲು ಸೂಚಿಸಿತು. |
| 07 | 2024/12/07 | ಪ್ರೊ. ಪರಶುರಾಮ ಬನ್ನಿಗಿಡದ, ಪ್ರಾಧ್ಯಾಪಕರು, ಗಣಕವಿಜ್ಞಾನ ವಿಭಾಗ ಇವರು ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ ವರ್ಗಾವಣೆ ಬಯಸಿ ಅದಕ್ಕೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವಂತೆ ಕೋರಿರುವ ಕುರಿತು. |
| ತೀರ್ಮಾನ | | ಪ್ರೊ. ಪರಶುರಾಮ ಬನ್ನಿಗಿಡದ, ಪ್ರಾಧ್ಯಾಪಕರು, ಗಣಕವಿಜ್ಞಾನ ವಿಭಾಗ ಇವರು ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ ಇಲ್ಲಿಗೆ ಹುದ್ದೆರಹಿತವಾಗಿ ಕಳುಹಿಸಲು ಒಪ್ಪಿಗೆ ಸೂಚಿಸಿತು. ಮುಂದುವರೆದು, ವರ್ಗಾವಣೆ ಬಯಸುವ ವಿಶ್ವವಿದ್ಯಾಲಯದಿಂದ ಸಿಬ್ಬಂದಿಯು ಮೊದಲು ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆದ ನಂತರ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ NoC ನೀಡಲು ಸಭೆ ತೀರ್ಮಾನಿಸಿತು. |
| 08 | 2024/12/08 | ವಿಶ್ವವಿದ್ಯಾಲಯದ ಹೆಸರನ್ನು "ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ" ಎಂದು ಮಾಡಲು ಮತ್ತು ವಿಶ್ವವಿದ್ಯಾಲಯದ ಇತಿಹಾಸ ಅಧ್ಯಯನ ವಿಭಾಗವನ್ನು ಕಿತ್ತೂರು ಪಟ್ಟಣಕ್ಕೆ ಸ್ಥಳಾಂತರಿಸಲು ಮನವಿ ಸಲ್ಲಿಸಿರುವ ಕುರಿತು. |
| ತೀರ್ಮಾನ | | ಬೆಂಗಳೂರಿನಲ್ಲಿ ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕಿತ್ತೂರು ಚನ್ನಮ್ಮ ಅಭಿವೃದ್ಧಿ ಪ್ರಾಧಿಕಾರದ ಸಭೆಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಹೆಸರಿನ |

| | | |
|---|---|---|
| | | ಮುಂದೆ 'ಕಿತ್ತೂರು' ಅಂತಾ ಸೇರ್ಪಡಿಸಿ "ಕಿತ್ತೂರು ರಾಣಿ ಚನ್ನಮ್ಮ" ವಿಶ್ವವಿದ್ಯಾಲಯವೆಂದು ಮರುನಾಮಕರಣ ಮಾಡಲು ನಿರ್ಧರಿಸಲಾಗಿದೆ. ಕಾರಣ, ಪ್ರಸ್ತುತ ಇರುವ ಹೆಸರಿಗೆ "ಕಿತ್ತೂರು" ಅಂತಾ ಸೇರ್ಪಡೆ ಮಾಡುವ ವಿಷಯವನ್ನು ಸಭೆಗೆ ಮಂಡಿಸಲಾಯಿತು. ರಾಣಿ ಚನಮ್ಮ ವಿಶ್ವವಿದ್ಯಾಲಯದ ಹೆಸರಿಗೆ "ಕಿತ್ತೂರು" ಅಂತಾ ಸೇರ್ಪಡಿಸಲು ಸಭೆಯು ಒಪ್ಪಿಗೆ ನೀಡಿತು ಹಾಗೂ ಈ ಕುರಿತಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿತು.<br>ಮುಂದುವರೆದು, **2025–26** ನೇ ಶೈಕ್ಷಣಿಕ ಸಾಲಿನಿಂದ ಇತಿಹಾಸ ಅಧ್ಯಯನ ವಿಭಾಗವನ್ನು ಕಿತ್ತೂರಿನಲ್ಲಿ ಪ್ರಾರಂಭಿಸುವ ವಿಷಯವನ್ನು ಸಭೆಯು ಮುಂದೂಡಿತು. |
| 09 | 2024/12/09 | ಡಾ. ಟಿ. ಆರ್. ಅರುಣಕುಮಾರ, ಸಹಾಯಕ ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ ಇವರ ಜುಲೈ–2024 ನೇ ಸಾಲಿನ ವಾರ್ಷಿಕ ವೇತನ ಬಡ್ತಿ ಹಾಗೂ ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ನೀಡುವ ಕುರಿತು. |
| ತೀರ್ಮಾನ | | ಡಾ. ಟಿ. ಆರ್. ಅರುಣಕುಮಾರ, ಸಹಾಯಕ ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ ಇವರನ್ನು ಮುಖ್ಯ ಆವರಣ, ರಾಚವಿ, ಬೆಳಗಾವಿಯಿಂದ ಸ್ನಾತಕೋತ್ತರ ಕೇಂದ್ರ, ವಿಜಯಪುರ ಇಲ್ಲಿಗೆ ವರ್ಗಾವಣೆ ಮಾಡಲಾಗಿದೆ. ಈ ಕಾರಣದಿಂದಾಗಿ ವಿಶ್ವವಿದ್ಯಾಲಯದ ಅನುಮತಿಯನ್ನು ಪಡೆಯದೇ ಸದರಿ ಸಿಬ್ಬಂದಿಯು ನ್ಯಾಯಾಲಯದ ಮೋರೆ ಹೋಗಿದ್ದ ಕಾರಣ ವಾರ್ಷಿಕ ವೇತನ ಬಡ್ತಿ ಹಾಗೂ ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿಯನ್ನು ನೀಡಿರುವುದಿಲ್ಲ. ಪ್ರಸ್ತುತ ನ್ಯಾಯಾಲಯದಲ್ಲಿ ಈ ಪ್ರಕರಣವು ಇತ್ಯರ್ಥವಾಗಿ, ಸದರಿಯವರು ವರ್ಗಾವಣೆಗೊಂಡ ಸ್ಥಳಕ್ಕೆ ಹಾಜರಾಗಿರುತ್ತಾರೆ. ಕಾರಣ, ಡಾ. ಟಿ. ಆರ್. ಅರುಣಕುಮಾರ ಇವರಿಗೆ ಜುಲೈ–**2024** ನೇ ಸಾಲಿನ ವಾರ್ಷಿಕ ವೇತನ ಬಡ್ತಿ ಮತ್ತು ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ನೀಡಲು ಸಭೆಯು ಅನುಮೋದನೆ ನೀಡಿತು.<br>ಮುಂದುವರೆದು, ಬೋಧಕೇತರ ಸಿಬ್ಬಂದಿಯಾದ ಶ್ರೀ ಮಾರುತಿ ಕರಿಯವರ, ದ್ವಿತೀಯ ದರ್ಜೆ ಸಹಾಯಕರು ಇವರು ಉಳಿಕೆ ವೃಂದದಲ್ಲಿ ಲಭ್ಯವಿರುವ ಕಛೇರಿ ಅಧೀಕ್ಷಕರ ಹುದ್ದೆ ನೇಮಕಾತಿ ಕುರಿತಾಗಿ ವಿಶ್ವವಿದ್ಯಾಲಯದ ಅನುಮತಿಯನ್ನು ಪಡೆಯದೇ ನ್ಯಾಯಾಲಯದ ಮೋರೆ ಹೋಗಿದ್ದರು. ಕಾರಣ, ಸದರಿ ಸಿಬ್ಬಂದಿಯ ತಡಹಿಡಿಯಲಾಗಿರುವ ವಾರ್ಷಿಕ ವೇತನ ಬಡ್ತಿಯನ್ನು ಕೂಡ ಮಂಜೂರು ಮಾಡಲು ಸಭೆಯು ಅನುಮೋದನೆ ನೀಡಿತು. |
| 10 | 2024/12/10 | ಒಂದೇ ಹುದ್ದೆಯಲ್ಲಿ ಸತತವಾಗಿ 10 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ವಿವಿಧ ವೃಂದದ ಹುದ್ದೆಯ ಖಾಯಂ ಬೋಧಕೇತರ ಸಿಬ್ಬಂದಿಗಳಿಗೆ ಕಾಲಮಿತಿ ಬಡ್ತಿ ಮಂಜೂರು ಮಾಡುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸತತವಾಗಿ **10** ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಹ ಒಟ್ಟು **75** ಜನ ಖಾಯಂ ಬೋಧಕೇತರ ಸಿಬ್ಬಂದಿಗಳಿಗೆ ಕರ್ನಾಟಕ ನಾಗರಿಕ ಸೇವಾ(ಕಾಲಬದ್ಧ ಮುಂಬಡ್ತಿ) ನಿಯಮಗಳು **1983** ಹಾಗೂ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ ನಿಯಮ **8** ರ ಉಪಖಂಡಿಕೆ **48**(ಸಿ) ಮತ್ತು **42** (ಬಿ) ಗಳ ನಿಯಮಾನುಸಾರ ಕಾಲಮಿತಿ ಬಡ್ತಿಯನ್ನು (Time Bound Advancement) ಮಂಜೂರು ಮಾಡಲು ಸಭೆಯು ಅನುಮೋದನೆ ನೀಡಿತು.<br>ಮುಂದುವರೆದು, ಅರ್ಹ ಸಿಬ್ಬಂದಿಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿಭಾಗಗಳ ಮುಖ್ಯಸ್ಥರುಗಳಿಂದ ಸೇವಾ ತೃಪ್ತಿಕರ ಪ್ರಮಾಣ ಪತ್ರವನ್ನು ಪಡೆದುಕೊಂಡು ಅದರ ವರದಿಯನ್ವಯ ಸಿಬ್ಬಂದಿಗಳಿಗೆ ಕಾಲಮಿತಿ ಬಡ್ತಿ ಮಂಜೂರು ಮಾಡಲು ಶರತ್ತು ವಿಧಿಸಿತು. |
| 11 | 2024/12/11 | ತಾತ್ಕಾಲಿಕ ಸಂಚಿತ ವೇತನ ಆಧಾರದ ಮೇಲೆ ಸೇವೆಯನ್ನು ಸಲ್ಲಿಸುತ್ತಿರುವ ಸಿಬ್ಬಂದಿಗಳ ವೇತನ ಪರಿಷ್ಕೃತಗೊಳಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ತಾತ್ಕಾಲಿಕ ಸಂಚಿತ ವೇತನದ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ವೇತನವನ್ನು ಪರಿಷ್ಕರಿಸಲು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ದಿನಾಂಕ: **20.11.2024** ರಂದು ಸಭೆ ನಡೆಸಿ ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಗತಿಯನ್ನು ಪರಿಶೀಲಿಸಿ 7ನೇ ರಾಜ್ಯ ವೇತನ ಆಯೋಗದ ವೇತನ ಶ್ರೇಣಿಯ ಮೂಲ ವೇತನಕ್ಕೆ ಶೇಕಡಾ **82.5%** ರಷ್ಟು ವೇತನವನ್ನು ನೀಡುವಂತೆ ನೀಡಿರುವ ವರದಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು ಹಾಗೂ ಜನವರಿ–**2025** ರಿಂದ ಜಾರಿಗೊಳಿಸಲು ಸಭೆಯು ಸೂಚಿಸಿತು. |
| 12 | 2024/12/12 | PM-USHA MERU ಯೋಜನೆಗೆ ಸಂಬಂಧಿಸಿದ ಸಮಿತಿ ಸಭೆಗೆ ಹಾಜರಾದ ಬಾಹ್ಯ ಸದಸ್ಯರಿಗೆ ಪ್ರಯಾಣ ಭತ್ಯೆ ಮತ್ತು ಆಸನ ಭತ್ಯೆ ನೀಡುವ ಕುರಿತು. |

<table>
<tr><td colspan="2">ತೀರ್ಮಾನ</td><td>PM-USHA MERU ಯೋಜನೆಯಲ್ಲಿ 100 ಕೋಟಿ ಅನುದಾನ ಮಂಜೂರಾಗಿದ್ದು, ವಿವಿಧ ಅಭಿವೃದ್ಧಿ ಕಾರ್ಯಗಳು ಪ್ರಗತಿಯಲ್ಲಿವೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ವಿಶ್ವವಿದ್ಯಾಲಯಗಳಿಂದ, ಕಛೇರಿಗಳಿಂದ ಹಾಗೂ ಸಂಸ್ಥೆಗಳಿಂದ ಬಾಹ್ಯ ಸದಸ್ಯರನ್ನು ಒಳಗೊಂಡ ವಿವಿಧ ಸಮಿತಿ ನೇಮಕ ಮಾಡಿ ಆದೇಶಿಸಲಾಗಿದೆ. ಸದರಿ ಸಮಿತಿ ಸಭೆಗಳಿಗೆ ಹಾಜರಾದ ಬಾಹ್ಯ ಸದಸ್ಯರಿಗೆ ಪ್ರಯಾಣ ಭತ್ಯೆ ರೂ.8/- ಪ್ರತಿ ಕಿ.ಮೀ. ನೀಡಲು ಹಾಗೂ ಆಸನ ಭತ್ಯೆ ರೂ.5000/-ರಂತೆ ನೀಡಲು ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು.</td></tr>
<tr><td>13</td><td>2024/12/13</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಮಾನವಶಾಸ್ತ್ರ(Anthropology) ವಿಭಾಗವವನ್ನು ಪ್ರಾರಂಭಿಸಲು ಅನುಮೋದನೆ ಕೋರಿರುವ ಕುರಿತು.</td></tr>
<tr><td colspan="2">ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಮಾನವಶಾಸ್ತ್ರ(Anthropology)ವಿಭಾಗವನ್ನು ಸ್ಥಾಪಿಸುವುದರಿಂದ ಈ ಭಾಗವನ್ನು ಸಾಂಸ್ಕೃತಿಕ ಪರಂಪರೆ ಮತ್ತು ಪ್ರವಾಸಿ ತಾಣವನ್ನಾಗಿ ನಿರ್ಮಿಸಲು ಸಹಕಾರಿಯಾಗುತ್ತದೆ ಮತ್ತು ವಿಶ್ವವಿದ್ಯಾಲಯದ ಕೀರ್ತಿಯು ಹೆಚ್ಚುವುದು. ಮುಂದುವರೆದು, ವಿಶ್ವವಿದ್ಯಾಲಯದ ಬಿ.ಓ.ಎಸ್. ಸಭೆಯಲ್ಲಿ ಈ ಕುರಿತಾಗಿ ಅನುಮೋದನೆಯನ್ನು ಪಡೆದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದಲ್ಲಿ ಸರ್ಕಾರದಿಂದ ಅನುದಾನ ಕೂಡ ದೊರೆಯುವುದು ಇದರಿಂದಾಗಿ ಹೆಚ್ಚಿನ ಆದಾಯವನ್ನು ಕೂಡ ವಿಶ್ವವಿದ್ಯಾಲಯವು ನಿರೀಕ್ಷಿಸಬಹುದಾಗಿದೆ ಎಂದು ಶ್ರೀ ಮಹಾಂತೇಶ ಕಂಬಾರ ಇವರು ಮನವಿ ಮಾಡಿದರು. ಇದಕ್ಕೆ ದನಿಗೂಡಿಸಿದ ಶ್ರೀ ರಫೀ ಭಂಡಾರಿ ಇವರು ಮಾನವಶಾಸ್ತ್ರ ವಿಭಾಗದೊಂದಿಗೆ ವಿಶ್ವವಿದ್ಯಾಲಯದಲ್ಲಿ ಉರ್ದು ವಿಭಾಗವನ್ನು ಕೂಡ ಪ್ರಾರಂಭಿಸುವುದು ಸಲಹೆ ನೀಡಿದರು.<br>ಚರ್ಚಿಸಿದ ಸಭೆಯು ಒಪ್ಪಿಗೆ ಸೂಚಿಸಿ, ಸರ್ಕಾರಕ್ಕೆ ಈ ಕುರಿತಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನಿಸಿತು.</td></tr>
<tr><td>14</td><td>2024/12/14</td><td>ಶ್ರೀ ರಫೀ ಭಂಡಾರಿ, ಸಿಂಡಿಕೇಟ್ ಸದಸ್ಯರು ಇವರು ಪ್ರಸ್ತಾಪಿಸಿರುವ ವಿಷಯಗಳು</td></tr>
<tr><td colspan="2">ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸ್‌ಗಳ ವಿವಿಧ ವಿಭಾಗಗಳಲ್ಲಿ ಪ್ರವೇಶಾತಿ ಕಡಿಮೆಯಾಗುತ್ತಿರುವ ಕುರಿತು:-<br>ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೋರ್ಸ್‌ಗಳ ವಿವಿಧ ವಿಭಾಗಗಳಲ್ಲಿ ಪ್ರವೇಶಾತಿ ಕಡಿಮೆಯಾಗುತ್ತಿರುವ ಕುರಿತಾಗಿ ಪರಿಶೀಲಿಸಲು ಈ ಕೆಳಕಾಣಿಸಿದಂತೆ ಒಂದು ಸಮಿತಿ ರಚಿಸಲು ಸಭೆಯು ತೀರ್ಮಾನಿಸಿತು.
<table>
<tr><th>ಸಂ</th><th>ಹೆಸರು</th><th>ಪದನಾಮ</th></tr>
<tr><td>1</td><td>ಶ್ರೀ ರಫೀ ಭಂಡಾರಿ</td><td>ಅಧ್ಯಕ್ಷರು</td></tr>
<tr><td>2</td><td>ಪ್ರೊ. ಎಸ್. ಬಿ. ಆಕಾಶ</td><td>ಸದಸ್ಯರು</td></tr>
<tr><td>3</td><td>ಶ್ರೀಮತಿ ಶಾರದಾಮಣಿ ಹುಣಶಾಳ</td><td>ಸದಸ್ಯರು</td></tr>
<tr><td>4</td><td>ಶ್ರೀ ವಿನೀತ ಜೋಷಿ</td><td>ಸದಸ್ಯರು</td></tr>
<tr><td>5</td><td>ಪ್ರೊ. ಎಸ್.ಎಂ. ಗಂಗಾಧರಯ್ಯ</td><td>ಸದಸ್ಯ ಕಾರ್ಯದರ್ಶಿ</td></tr>
</table>
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿಜಯಪುರದ ಸ್ನಾತಕೋತ್ತರ ಕೇಂದ್ರದ ಅಭಿವೃದ್ಧಿ ಕುರಿತು:-<br>ಸ್ನಾತಕೋತ್ತರ ಕೇಂದ್ರ, ವಿಜಯಪುರದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದು.<br>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಪರೀಕ್ಷಾ ವೇಳಾಪಟ್ಟಿ ಪರಿಷ್ಕರಿಸುವ ಕುರಿತು:-<br>ಕೋವಿಡ್‌ನಿಂದಾಗಿ ಶೈಕ್ಷಣಿಕ ಮತ್ತು ಪರೀಕ್ಷಾ ವೇಳಾಪಟ್ಟಿಗಳಲ್ಲಿ ಹಿನ್ನಡೆಯಾದ ಕಾರಣ, 2024-25 ನೇ ಶೈಕ್ಷಣಿಕ ಸಾಲಿನಿಂದ Hybrid Mode ನ್ನು ಅನುಸರಿಸುತ್ತಿದ್ದು ಪ್ರವೇಶಾತಿಯಿಂದ ಪರೀಕ್ಷಾ ಕಾರ್ಯದ ಪ್ರಕ್ರಿಯೆಗಳನ್ನು ಎಪ್ರಿಲ್/ಮೇ-2025 ರ ಒಳಗಾಗಿ ಪೂರ್ತಿಗೊಳಿಸಲಾಗುವುದು ಹಾಗೂ 2025-26 ನೇ ಸಾಲಿನಿಂದ ಶೈಕ್ಷಣಿಕ ವೇಳಾಪಟ್ಟಿಯನ್ನು ಜೂನ್-2025 ರಲ್ಲಿ ಪ್ರಾರಂಭಿಸಿ ಸರಿಪಡಿಸಲಾಗುವುದು ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.</td></tr>
</table>

| | | |
|---|---|---|
| 17 (continued) | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಯ ಅರ್ಜಿ ತುಂಬುವುದು, ಪರೀಕ್ಷಾ ಫಲಿತಾಂಶ, ಮರುಮೌಲ್ಯಮಾಪನ ಇದರ ಫಲಿತಾಂಶ ಸುಧಾರಿಸುವ ಕುರಿತು:–<br><br>UUCMS ತಂತ್ರಾಂಶದಿಂದಾಗಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ಹಲವಾರು ತೊಂದರೆಯಾಗುತ್ತಿರುವ ಕಾರಣ ಈ ಕುರಿತಾಗಿ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯು ಸೂಚಿಸಿತು. |
| 15 | 2024/12/15 | ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಹೆಚ್ಚುವರಿ ಶುಲ್ಕ ಪಡೆಯುತ್ತಿರುವ ಕುರಿತು ವಿದ್ಯಾರ್ಥಿಗಳು ನೀಡಿರುವ ದೂರಿನ ಬಗ್ಗೆ ಚರ್ಚಿಸುವುದು. |
| ತೀರ್ಮಾನ | | ವಿಜಯಪುರ ಜಿಲ್ಲೆಯಲ್ಲಿ ಬರುವ ಎಸ್.ಎಮ್.ಆರ್. ಕೆ ಹಾಗೂ ಶ್ರೀ ಮೋನಿಕಾ ಕನ್ನಿ ಶಿಕ್ಷಣ ಮಹಾವಿದ್ಯಾಲಯ, ವಿಜಯಪುರ ಇಲ್ಲಿ ಪ್ರವೇಶಾತಿ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕವನ್ನು ಪಡೆಯುತ್ತಿದ್ದಾರೆ ಎಂದು ದಲಿತ ವಿದ್ಯಾರ್ಥಿಗಳು ವಿಶ್ವವಿದ್ಯಾಲಯಕ್ಕೆ ದೂರು ನೀಡಿರುತ್ತಾರೆ. ಈ ಪ್ರಕರಣವನ್ನು ತನಿಖೆ ನಡೆಸಲು ಈ ಕೆಳಕಾಣಿಸಿದಂತೆ ಸಮಿತಿಯನ್ನು ರಚಿಸಲು ಸಭೆಯು ತೀರ್ಮಾನಿಸಿತು. |

| ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ರಫೀ ಭಂಡಾರಿ | ಅಧ್ಯಕ್ಷರು |
| 2 | ಪ್ರೊ. ಎಸ್. ಬಿ. ಆಕಾಶ | ಸದಸ್ಯರು |
| 3 | ಶ್ರೀಮತಿ ಶಾರದಾಮಣಿ ಹುಣಶಾಳ | ಸದಸ್ಯರು |
| 4 | ಶ್ರೀ ವಿನೀತ ಜೋಷಿ | ಸದಸ್ಯರು |
| 5 | ಪ್ರೊ. ಎಸ್.ಎಂ. ಗಂಗಾಧರಯ್ಯ | ಸದಸ್ಯ ಕಾರ್ಯದರ್ಶಿ |

| | | |
|---|---|---|
| 16 | 2024/12/16 | ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಡಾ. ಭವಾನಿಶಂಕರ ಇವರ ಪಿಹೆಚ್.ಡಿ. ಸಂಶೋಧನಾ ಮಾರ್ಗದರ್ಶನದ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಉಪ–ಗ್ರಂಥಪಾಲಕರಾದ ಡಾ. ಭವಾನಿಶಂಕರ ಇವರಿಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಿಹೆಚ್.ಡಿ. ನಿಯಮಾವಳಿಗಳ ಅನ್ವಯ ದಿನಾಂಕ: **15.09.2023** ರಂದು ಗ್ರಂಥಾಲಯ ಮಾಹಿತಿ ವಿಜ್ಞಾನ ವಿಭಾಗದಲ್ಲಿ ಸಂಶೋಧನಾ ಮಾರ್ಗದರ್ಶಕರಾಗಿ ಆದೇಶಿಸಲಾಗಿತ್ತು. ಗ್ರಂಥಾಲಯ ಮಾಹಿತಿ ವಿಜ್ಞಾನ ವಿಭಾಗದ ಅಭ್ಯಾಸ ಮಂಡಳಿಯಲ್ಲಿ ಅವರನ್ನು ಪಿಹೆಚ್.ಡಿ. ಮಾರ್ಗದರ್ಶಕರನ್ನಾಗಿ ಮಾಡಲು ನಿರಾಕರಿಸಲಾಗಿತ್ತು. ಅದರಂತೆ ದಿನಾಂಕ: **11.09.2024** ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಸದರಿಯವರ ಅರ್ಜಿಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಭಾಗದ ಅಭ್ಯಾಸ ಮಂಡಳಿಗೆ ತಿಳಿಸಲು ಸೂಚಿಸಲಾಗಿತ್ತು. ಮುಂದುವರೆದು, ದಿನಾಂಕ: **27.09.2024** ರಂದು ಜರುಗಿದ ಸಾಮಾನ್ಯ ವಿದ್ಯಾವಿಷಯಕ್ ಪರಿಷತ್ತಿನ ಸಭೆಯಲ್ಲಿ ಡಾ. ಭವಾನಿ ಶಂಕರ ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ಯುಜಿಸಿ ನಿಯಮಾವಳಿಗಳಂತೆ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು ಹಾಗೂ ವಿಶ್ವವಿದ್ಯಾಲಯದ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡಲು ಸೂಚಿಸಿತು.<br>ಮುಂದುವರೆದು, ಯುಜಿಸಿ ನಿಯಮಾವಳಿಗಳ ಪ್ರಕಾರ ಗ್ರಂಥಪಾಲಕರು/ಉಪಗ್ರಂಥಪಾಲಕರು/ಸಹಾಯಕ ಗ್ರಂಥಪಾಲಕರುಗಳಿಗೆ ಪಿಹೆಚ್.ಡಿ. ಸಂಶೋಧನಾ ಮಾರ್ಗದರ್ಶನ ನೀಡುವ ಕುರಿತು ಯಾವುದೇ ನಿಯಮಾವಳಿಗಳಿರುವುದಿಲ್ಲ. ಆದ್ದರಿಂದ ಡಾ. ಭವಾನಿಶಂಕರ ಇವರ ಪಿಹೆಚ್.ಡಿ. ಸಂಶೋಧನಾ ಮಾರ್ಗದರ್ಶನದ ಕುರಿತಾಗಿ ಸಭೆಯ ಮಾರ್ಗದರ್ಶನ ಕೋರಲಾಯಿತು.<br>ಯುಜಿಸಿ ನಿಯಮಾವಳಿಗಳಲ್ಲಿ ಗ್ರಂಥಪಾಲಕರು/ಉಪಗ್ರಂಥಪಾಲಕರು/ಸಹಾಯಕ ಗ್ರಂಥಪಾಲಕರುಗಳಿಗೆ ಪಿಎಚ್.ಡಿ. ಸಂಶೋಧನಾ ಮಾರ್ಗದರ್ಶನಕರಾಗಿ ನೇಮಕ ಮಾಡಲು ಅವಕಾಶವಿಲ್ಲ. ಕಾರಣ, ಯುಜಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| 17 | 2024/12/17 | ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು |
| ತೀರ್ಮಾನ | | ದಿನಾಂಕ: **13.11.2024** ರಂದು ಜರುಗಿದ **2024–25**ನೇ ಸಾಲಿನ ಎರಡನೇ ಹಣಕಾಸು ಸಮಿತಿ ಸಭೆಯ ನಡಾವಳಿ ಮತ್ತು **2022–23**ನೇ ಸಾಲಿನ ಲೆಕ್ಕ ಪರಿಶೋಧನೆಯ ಅನುಪಾಲನಾ ವರದಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. |

| | | |
|---|---|---|
| 18 | 2024/12/18 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ 2010 ರಿಂದ 2021 ರ ರವರೆಗೆ ಪ್ರವೇಶ ಪಡೆದು ನಿಗದಿತ ಅವಧಿಗಳಲ್ಲಿ ಪದವಿಗಳನ್ನು ಪೂರ್ಣಗೊಳಿಸದ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ ಪರೀಕ್ಷೆಗಳನ್ನು ಜರುಗಿಸುವ ಕುರಿತು. |
| | ತೀರ್ಮಾನ | **2010** ರಿಂದ **2019** ರ ವರೆಗಿನ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಅನುತ್ತೀರ್ಣಗೊಂಡು ನಿಗದಿತ ಅವಧಿಗಳಲ್ಲಿ ಪದವಿಗಳನ್ನು ಪೂರ್ಣಗೊಳಿಸದೇ ಇರುವ ಅನೇಕ ವಿದ್ಯಾರ್ಥಿಗಳು ಇನ್ನೊಮ್ಮೆ ಪರೀಕ್ಷೆ ಬರೆಯಲು ಅವಕಾಶ ನೀಡುವಂತೆ ಮನವಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ದಶಮಾನೋತ್ಸವದ ಪ್ರಯುಕ್ತವಾಗಿ, ಸದರಿ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ ಪರೀಕ್ಷೆಗಳನ್ನು ನವೆಂಬರ್-**2021** ರಲ್ಲಿ ಜರುಗಿಸಲಾಗಿದೆ. ಪ್ರಸ್ತುತ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಸಿ.ಬಿ.ಸಿ.ಎಸ್ ಮತ್ತು ನಾನ್ ಸಿ.ಬಿ.ಸಿ.ಎಸ್ ಪಠ್ಯಕ್ರಮಗಳ ಬೋಧನೆ ಅಂತ್ಯವಾಗಿದ್ದು, ಎನ್.ಇ.ಪಿ ಪಠ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತಿದೆ. ಹೀಗಾಗಿ, ನಿಗದಿತ ಅವಧಿಯಲ್ಲಿ ಪದವಿ ಪೂರ್ಣಗೊಳಿಸದ ವಿದ್ಯಾರ್ಥಿಗಳು ಮತ್ತೊಮ್ಮೆ ಸುವರ್ಣಾವಕಾಶ ಪರೀಕ್ಷೆಗಳನ್ನು ನಡೆಸುವಂತೆ ವಿನಂತಿಸಿರುತ್ತಾರೆ. ಪ್ರಸ್ತುತ ಯು.ಯು.ಸಿ.ಎಮ್.ಎಸ್. ಪರೀಕ್ಷಾ ತಂತ್ರಾಂಶವನ್ನು **2021-22** ನೇ ಸಾಲಿನಿಂದ ವಿಶ್ವವಿದ್ಯಾಲಯದಲ್ಲಿ ಅಳವಡಿಸಲಾಗಿದ್ದು, **2010** ರಿಂದ **2021** ರವರೆಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳನ್ನು ಯು.ಯು.ಸಿ.ಎಮ್.ಎಸ್. ಪರೀಕ್ಷಾ ತಂತ್ರಾಂಶದಡಿಯಲ್ಲಿ ನಮೂದಿಸಲು ಅವಕಾಶವಿರುವುದಿಲ್ಲ. ದಿನಾಂಕ: **27.09.2024** ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ತಿನ ಸಭೆಯಲ್ಲಿ ಸುವರ್ಣಾವಕಾಶ ಪರೀಕ್ಷೆಗಳನ್ನು ಜಗುರಿಸುವ ಕುರಿತಂತೆ ಮಾನದಂಡ ಮತ್ತು ನಿಯಮಾವಳಿಗಳನ್ನು ರೂಪಿಸಲು ಅನುಮೋದನೆ ಪಡೆಯಲಾಗಿದೆ. ಆದರೆ, ಹೊಸದಾಗಿ ಮಾನದಂಡಗಳನ್ನು ರೂಪಿಸಲು ಸಮಿತಿ ರಚಿಸಿ, ವರದಿ ಪಡೆಯಲು ಹೆಚ್ಚುವರಿ ಸಮಯಬೇಕಾಗುತ್ತದೆ. ಕಾರಣ, **2010** ರಿಂದ **2021** ರಲ್ಲಿ ವಿವಿಧ ಪದವಿಗಳಿಗೆ ಪ್ರವೇಶ ಪಡೆದು ನಿಗದಿತ ಕೋರ್ಸ್ ಅವಧಿಗಳಲ್ಲಿ ಪದವಿಗಳನ್ನು ಪೂರ್ಣಗೊಳಿಸದೇ ಇರುವ ಅಂದಾಜು **72000** ವಿದ್ಯಾರ್ಥಿಗಳಿಗೆ, ನವೆಂಬರ್-**2021** ರ ಸುವರ್ಣಾವಕಾಶ ಪರೀಕ್ಷೆಗಳಿಗೆ ರೂಪಿಸಿಕೊಳ್ಳಲಾದ ಮಾನದಂಡ ಮತ್ತು ನಿಯಮಾವಳಿಗಳನ್ವಯ ಪರಿಷ್ಕೃತ ಶುಲ್ಕದೊಂದಿಗೆ ಸುವರ್ಣಾವಕಾಶ ಪರೀಕ್ಷೆಗಳನ್ನು ನಡೆಸಲು ಕುಲಸಚಿವರು(ಮೌಲ್ಯಮಾಪನ) ಇವರು ಸಭೆಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಸಭೆಯು ಅನುಮೋದನೆ ನೀಡಿತು. |
| 19 | 2024/12/19 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಸ್ನಾತಕ, ಸ್ನಾತಕೋತ್ತರ ಪರೀಕ್ಷೆಗಳ ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳನ್ನು ಹಾಗೂ ಇತರೆ ದಾಖಲೆಗಳನ್ನು ವಿಲೇವಾರಿ ಮಾಡಲು ಟೆಂಡರ್ ಆಹ್ವಾನಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದ ನಂತರ ಆರು ತಿಂಗಳ ವರೆಗೆ ಶೇಖರಿಸಿಡಲಾಗುತ್ತದೆ. ತದನಂತರ ಸದರಿ ಉತ್ತರ ಪತ್ರಿಕೆಗಳನ್ನು ವಿಲೇವಾರಿ ಮಾಡಲಾಗುತ್ತಿದೆ. ಈ ಕುರಿತಾಗಿ ದಿನಾಂಕ: **30.03.2017** ರ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದುಕೊಂಡು ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ, ಅರ್ಹ ಬಿಡ್‌ದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಪ್ರಸ್ತುತ ಸದರಿ ಕರಾರು ಒಪ್ಪಂದದ ಅವಧಿಯು ಮುಕ್ತಾಯವಾಗಿರುತ್ತದೆ. ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ ಉತ್ತರ ಪತ್ರಿಕೆಗಳ ಸಂಗ್ರಹಕ್ಕೆ ಶೇಖರಣಾ ಕೊಠಡಿಗಳು ಲಭ್ಯವಿಲ್ಲವಾದ್ದರಿಂದ, ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳ ಕನಿಷ್ಠ ಶೇಖರಣಾ ಅವಧಿ ಮುಗಿದ ನಂತರ ವಿಲೇವಾರಿ ಮಾಡುವುದು ಅನಿವಾರ್ಯವಾಗಿರುತ್ತದೆ. ಮುಂಬರುವ **2** ವರ್ಷಗಳಲ್ಲಿ ಅಂದಾಜು **100** ಟನ್ ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳು ಹಾಗೂ ಇತರೆ ದಾಖಲೆಗಳು ಪರೀಕ್ಷಾ ವಿಭಾಗದಿಂದ ಉದ್ಭವವಾಗಲಿದ್ದು, ಇವುಗಳ ಅಂದಾಜು ಮೊತ್ತ ರೂ. **41** ಲಕ್ಷಗಳಾಗಲಿವೆ ಎಂಬ ಮಾಹಿತಿಯನ್ನು ಕುಲಸಚಿವರು(ಮೌ) ಇವರು ಸಭೆಗೆ ನೀಡಿದರು. ಆದ್ದರಿಂದ, ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳನ್ನು ವಿಲೇವಾರಿ ಮಾಡಲು ಟೆಂಡರ್ ಆಹ್ವಾನಿಸಲು ಸಭೆಯು ಅನುಮೋದನೆ ನೀಡಿತು. |
| 20 | 2024/12/20 | ತಂತ್ರಾಂಶದಡಿಯಲ್ಲಿ ನಿರ್ವಹಿಸಲಾಗುವ 2024-25ನೇ ಶೈಕ್ಷಣಿಕ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳ ಪರೀಕ್ಷಾ ನಂತರದ ಕಾರ್ಯಗಳನ್ನು, ವಿಶ್ವವಿದ್ಯಾಲಯಕ್ಕೆ ದೊರೆತಿರುವ 4(ಜಿ) ವಿನಾಯಿತಿ ಅಡಿಯಲ್ಲಿ ಲಾಜಿಸಿಸ್, ಬೆಂಗಳೂರು ಇವರಿಂದ ನಿರ್ವಹಿಸಿಕೊಳ್ಳಲು ಅನುಮೋದನೆ ಕುರಿತು. |

| | | |
|---|---|---|
| | ತೀರ್ಮಾನ | 2024-25 ನೇ ಸಾಲಿನ ಎಲ್ಲ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ I, III, V ಮತ್ತು II, IV VI ನೇ ಸೆಮಿಸ್ಟರ್ ಪರೀಕ್ಷೆಗಳ ಪರೀಕ್ಷಾ ನಂತರದ ಕಾರ್ಯಗಳಾದ Coding Decoding, Marks Entry, Marks Entry uploading etc ಕಾರ್ಯಗಳನ್ನು ಹಾಗೂ ಸದರಿ ಕಾರ್ಯಕ್ಕೆ ಬೇಕಾಗುವ ಅಗತ್ಯ ಯಂತ್ರೋಪಕರಣಗಳನ್ನು ಲೇಬಲ್, ಸ್ಟಿಕರ್, ಪ್ಯಾಕೆಟ್ಸ್ ಮತ್ತು ಇನ್ನಿತರೆ ಸ್ಟೇಶನರಿ ಸಾಮಗ್ರಿಗಳೊಂದಿಗೆ ನಿರ್ವಹಿಸಿಕೊಡುವಂತೆ ಲಾಜಿಸಿಸ್, ಬೆಂಗಳೂರು ಇವರಿಗೆ ವಹಿಸಲು ಸಭೆಯು ಅನುಮೋದನೆ ನೀಡಿದರು. |
| 21 | 2024/12/21 | 2024-25 ನೇ ಸಾಲಿಗೆ ಪರೀಕ್ಷಕರ ನೇಮಕಾತಿ ಮಂಡಳಿಗಳು ಸಲ್ಲಿಸಿದ ನಡಾವಳಿಗಳನ್ವಯ ಪರೀಕ್ಷಕರ ಮಂಡಳಿಗಳನ್ನು ರಚಿಸಿರುವುದಕ್ಕೆ ಹಾಗೂ ಸೂಚಿತ ಕೆಲವು ಪರೀಕ್ಷಕರ ಮಂಡಳಿಗಳ ಸದಸ್ಯರು ಲಭ್ಯವಿಲ್ಲದ ಸಂದರ್ಭದಲ್ಲಿ, ಹೊಸ ಸದಸ್ಯರನ್ನು ಸೇರಿಸಿ ಆದೇಶ ನೀಡಿರುವ ಕ್ರಮಕ್ಕೆ ಅನುಸಮರ್ಥನೆ ಕುರಿತು. |
| | ತೀರ್ಮಾನ | ದಿನಾಂಕ: **11.11.2024** ರಂದು ಕುವೆಂಪು ಸಭಾಂಗಣದಲ್ಲಿ ಜರುಗಿದ ಪರೀಕ್ಷಕರ ನೇಮಕಾತಿ ಮಂಡಳಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು ಹಾಗೂ ಸದರಿ ನಡಾವಳಿಯನ್ವಯ ಸ್ನಾತಕ ವಿಭಾಗಗಳಿಗೆ ಪರೀಕ್ಷಕ ಮಂಡಳಿಗಳನ್ನು ರಚಿಸಿ ಆದೇಶಿಸಲಾಗಿದೆ. ಅಲ್ಲದೇ, ಕೆಲವು ಪ್ರಾಧ್ಯಾಪಕರು ವರ್ಗಾವಣೆ/ನಿವೃತ್ತಿ ಹಾಗೂ ಇತರ ಕಾರಣಗಳಿಂದ ಲಭ್ಯವಿಲ್ಲದ ಸಂದರ್ಭದಲ್ಲಿ, ಲಭ್ಯವಿರುವ ಬೇರೆ ಪ್ರಾಧ್ಯಾಪಕರುಗಳನ್ನು ಮಂಡಳಿಗಳಿಗೆ ಸೇರಿಸಿ ಪರಿಷ್ಕೃತ ಆದೇಶಗಳನ್ನು ಹೊರಡಿಸಲಾಗಿದೆ. ಸದರಿ ಕ್ರಮಕ್ಕೆ ಸಭೆಯು ಅನುಸಮರ್ಥನೆ ನೀಡಿತು. ಸ್ನಾತಕೋತ್ತರ ವಿಭಾಗಗಳಿಗೆ ಪರೀಕ್ಷಕ ಮಂಡಳಿಗಳನ್ನು ರಚಿಸಲು ಸೂಚಿಸಿತು. ಮುಂದುವರೆದು, **2024–25** ನೇ ಶೈಕ್ಷಣಿಕ ವರ್ಷದಲ್ಲಿ ಪರೀಕ್ಷಕರ ಮಂಡಳಿಗಳ ಅಧ್ಯಕ್ಷರು/ಸದಸ್ಯರು ವರ್ಗಾವಣೆ/ನಿವೃತ್ತಿ ಹಾಗೂ ಇತರ ಕಾರಣಗಳಿಂದ ಪರೀಕ್ಷಾ ಕಾರ್ಯಕ್ಕೆ ಲಭ್ಯವಾಗದ ಸಂದರ್ಭದಲ್ಲಿ, ಬೇರೆ ಸಿಬ್ಬಂದಿಗಳನ್ನು ಪರೀಕ್ಷಕ ಮಂಡಳಿಗಳಿಗೆ ಸೇರಿಸಿಕೊಳ್ಳಲು ಸಭೆಯು ಅನುಮೋದನೆ ನೀಡಿತು. |
| | | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು** |
| I | 2024/12/I | ಶ್ರೀಮತಿ ಶಕುಂತಲಾ.ಕೆ.ಜಿ.ಎನ್. ಪ್ರಥಮ ದರ್ಜೆ ಸಹಾಯಕರು ಇವರನ್ನು ಕುವೆಂಪು ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವಂತೆ ಶಿಫಾರಸ್ಸು ಮಾಡಿರುವ ಕುರಿತು. |
| | ತೀರ್ಮಾನ | ಶ್ರೀಮತಿ ಶಕುಂತಲಾ.ಕೆ.ಜಿ.ಎನ್. ಪ್ರಥಮ ದರ್ಜೆ ಸಹಾಯಕರು ಇವರನ್ನು ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿಗೆ ವರ್ಗಾಯಿಸಲು ಸ್ಪಷ್ಟ ಅಭಿಪ್ರಾಯ ನೀಡುವಂತೆ ಸರ್ಕಾರದಿಂದ ಬಂದಿರುವ ಪತ್ರವನ್ನು ಸಭೆಯ ಗಮನಕ್ಕೆ ತರಲಾಯಿತು. ಚರ್ಚಿಸಿದ ಸಭೆಯು, ಸಿಬ್ಬಂದಿಗೆ ವರ್ಗಾವಣೆಯ ಅವಶ್ಯಕತೆ ಇರುವುದರಿಂದ(Genuine Reason) ವಿಶೇಷ ಸಂದರ್ಭವೆಂದು ಪರಿಗಣಿಸಿ ಹುದ್ದೆರಹಿತವಾಗಿ ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿಗೆ ವರ್ಗಾಯಿಸಲು ಒಪ್ಪಿಗೆ ಸೂಚಿಸಿ, ವರ್ಗಾವಣೆ ಬಯಸುವ ವಿಶ್ವವಿದ್ಯಾಲಯದಿಂದ ಸಿಬ್ಬಂದಿಯು ಮೊದಲು ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆದ ನಂತರ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ NoC ನೀಡಲು ಸಭೆ ತೀರ್ಮಾನಿಸಿತು. |
| II | 2024/12/II | Statute Governing rules of Business for Syndicate ಮತ್ತು Finance Committee ನ ಪರಿನಿಯಮ ಪುನರ್ ರಚಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ Statute Governing rules of Business for Syndicate ಮತ್ತು Finance Committee ನ ಪರಿನಿಯಮಗಳನ್ನು ಪರಿಷ್ಕರಿಸುವುದು ಅವಶ್ಯವಿರುವುದರಿಂದ ಈ ಕೆಳಕಾಣಿಸಿದಂತೆ ತಜ್ಞರ ಸಮಿತಿಯನ್ನು ರಚಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |

| ಸಂ | ಹೆಸರು | ಪದನಾಮ |
|---|---|---|
| 1 | ಶ್ರಿ ಮಾರುತಿ ಮುಂಡರಗಿ | ಅಧ್ಯಕ್ಷರು |
| 2 | ಶ್ರೀ ಈರಣ್ಣ ಬ. ಹಪ್ಪಲಿ | ಸದಸ್ಯರು |
| 3 | ಶ್ರೀ ಎಸ್. ಬಿ. ಉಕ್ಕಲಿ | ಸದಸ್ಯರು |
| 4 | ಶ್ರೀ ರವೀಂದ್ರ ನಾಯ್ಕರ | ಸದಸ್ಯರು |
| 5 | ಡಾ. ಹೆಚ್. ಕಾವೇರಿ | ಸದಸ್ಯರು |
| 6 | ಡಾ. ಡಿ. ಕೆ. ಕಾಂಬಳೆ | ಸದಸ್ಯರು |
| 7 | ಎಂ.ಎ. ಸಪ್ನ, ಕೆ.ಎ.ಎ.ಎಸ್ | ಸದಸ್ಯ ಕಾರ್ಯದರ್ಶಿಗಳು |

| | | |
|---|---|---|
| III | 2024/12/III | ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳ ವರ್ಗಾವಣೆಗೆ ಸಿಂಡಿಕೇಟ್ ಸಭೆಯ ಅನುಸಮರ್ಥನೆ ಕುರಿತು |
| | ತೀರ್ಮಾನ | ವಿಶ್ವವಿದ್ಯಾಲಯದ ಸಿಬ್ಬಂದಿಗಳಲ್ಲಿ ಕಾರ್ಯ ದಕ್ಷತೆ ಹೆಚ್ಚಿಸುವ ದೃಷ್ಟಿಯಿಂದ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ಕೆಳಕಾಣಿಸಿದಂತೆ ಬೋಧಕ ಸಿಬ್ಬಂದಿಗಳನ್ನು ವರ್ಗಾವಣೆ ಮಾಡಿ ಆದೇಶಿಸಲಾಗಿದೆ. ಸದರಿ ವಿಷಯವನ್ನು ಸಭೆಯ ಅನುಸಮರ್ಥನೆಗಾಗಿ ಮಂಡಿಸಲಾಯಿತು. |

| ಅ.ನಂ | ಹೆಸರು ಮತ್ತು ವಿಭಾಗ | ಹುದ್ದೆ | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ/ವಿಭಾಗ | ವರ್ಗಾವಣೆ ಮಾಡಿ ನಿಯುಕ್ತಿಗೊಳಿಸಬೇಕಾದ ಸ್ಥಳ/ವಿಭಾಗ |
|---|---|---|---|---|
| 01 | ಪ್ರೊ.ಎನ್.ಮಾರುತಿರಾವ್ | ಪ್ರಾಧ್ಯಾಪಕರು | ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗ ಮುಖ್ಯ ಆವರಣ, ರಾಚವಿ ಬೆಳಗಾವಿ | ವಾಣಿಜ್ಯಶಾಸ್ತ್ರ ವಿಭಾಗ, ರಾಚವಿ ಬೆಳಗಾವಿ |
| 02 | ಡಾ. ಯಾಸ್ಮೀನ್ ಬೇಗಂ ನದಾಫ್ | ಸಹಾಯಕ ಪ್ರಾಧ್ಯಾಪಕರು | ವಾಣಿಜ್ಯಶಾಸ್ತ್ರ ವಿಭಾಗ ಮುಖ್ಯ ಆವರಣ, ರಾಚವಿ ಬೆಳಗಾವಿ | ಆಡಳಿತ ಮತ್ತು ವ್ಯವಹಾರ ನಿರ್ವಹಣಾ ವಿಭಾಗ ಮುಖ್ಯ ಆವರಣ, ರಾಚವಿ ಬೆಳಗಾವಿ |
| 03 | ಡಾ. ಮಹೇಶ ಗಾಜಪ್ಪನವರ | ಸಹಾಯಕ ಪ್ರಾಧ್ಯಾಪಕರು | ಸಂಗೊಳ್ಳಿ ರಾಯಣ್ಣ ಪ್ರಥಮದರ್ಜೆಘಟಕ ಮಹಾವಿದ್ಯಾಲಯ ಬೆಳಗಾವಿ | ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ಮುಖ್ಯ ಆವರಣ, ರಾಚವಿ ಬೆಳಗಾವಿ |
| 03 | ಡಾ. ಸುನೀಲಕುಮಾರ ಹೊಸಮನಿ | ಸಹಾಯಕ ಪ್ರಾಧ್ಯಾಪಕರು | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ ಬೆಳಗಾವಿ | ಗಣಿತಶಾಸ್ತ್ರ ವಿಭಾಗ ಮುಖ್ಯ ಆವರಣ, ರಾಚವಿ ಬೆಳಗಾವಿ |

| | | |
|---|---|---|
| | ತೀರ್ಮಾನ | ಸದಸ್ಯರಾದ ಪ್ರೊ. ಎಸ್. ಬಿ. ಆಕಾಶ ಮಾತನಾಡಿ, ಡಾ. ಯಾಸ್ಮೀನ ಬೇಗಂ ನದಾಫ ಇವರನ್ನು ವಾಣಿಜ್ಯಶಾಸ್ತ್ರ ವಿಭಾಗದಿಂದ ಎಂ.ಬಿ.ಎ. ವಿಭಾಗಕ್ಕೆ ವರ್ಗಾಯಿಸಲಾಗಿದೆ. ಇದರಿಂದ ಸದರಿ ಸಿಬ್ಬಂದಿಯ ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಸಮಸ್ಯೆ ಉಂಟಾಗುತ್ತಿದೆ. ಸಂಶೋಧನಾರ್ಥಿಯ ಜೆ.ಆರ್.ಎಫ್. ಅರ್ಜಿಗೆ ವಿಭಾಗದ ಮುಖ್ಯಸ್ಥರ ಮುಖಾಂತರ ಕಳುಹಿಸುವ ಪ್ರಕ್ರಿಯೆ ಇರುವುದರಿಂದ ಮಾರ್ಗದರ್ಶಕರು ಎಂ.ಬಿ.ಎ. ವಿಭಾಗದಲ್ಲಿ ಕಾರ್ಯನಿರ್ವಹಿಸುವುದು, |

<table>
<tr><td></td><td></td><td>ಸಂಶೋಧನಾರ್ಥಿಗಳು ವಾಣಿಜ್ಯಶಾಸ್ತ್ರದಲ್ಲಿ ಅಧ್ಯಯನ ನಡೆಸುವುದರಿಂದ ತಾಂತ್ರಿಕ ಸಮಸ್ಯೆ ಉಂಟಾಗುತ್ತದೆ. ಕಾರಣ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸದರಿ ಬೋಧಕ ಸಿಬ್ಬಂದಿಯನ್ನು ವಾಣಿಜ್ಯಶಾಸ್ತ್ರ ವಿಭಾಗಕ್ಕೆ ಮರಳಿ ವರ್ಗಾಯಿಸಲು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಸ್ಥಾಪನೆಯಾದಾಗ School Concept ನ್ನು ಪ್ರಾರಂಭಿಸಲಾಗಿತ್ತು. ಇದರಡಿಯಲ್ಲಿ ಬರುವ School of Business and Economics(MBA Dept, Commerce Dept, Economincs Dept) ರಲ್ಲಿ ಪ್ರಾಧ್ಯಾಪಕರ ಹಿರಿತನ, ಶ್ರೇಷ್ಠತೆ, ಜ್ಞಾನ ವಿದ್ಯಾರ್ಥಿಗಳಿಗೆ ಲಭ್ಯವಾಗುವ ಸಲುವಾಗಿ ವಾಣಿಜ್ಯಶಾಸ್ತ್ರ ವಿಭಾಗದ ಅಧ್ಯಾಪಕರು ಅರ್ಥಶಾಸ್ತ್ರ ಮತ್ತು ಎಂ.ಬಿ.ಎ. ವಿಭಾಗಗಳಲ್ಲಿ ಬೋಧನೆಯನ್ನು ಮಾಡಬಹುದಾಗಿದೆ. ಈ ಹಿಂದೆಯು ಕೂಡ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎಚ್. ವಾಯ್. ಕಾಂಬಳೆ ಇವರು ವಾಣಿಜ್ಯಶಾಸ್ತ್ರ ಮತ್ತು ಎಂ.ಬಿ.ಎ. ವಿಭಾಗದಲ್ಲಿ ಮತ್ತು ಪ್ರೊ. ಮಾರುತಿರಾವ್ ಇವರು ಸ್ನಾತಕೋತ್ತರ ಕೇಂದ್ರ, ವಿಜಯಪುರದ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಪ್ರೊ. ಮಾರುತಿ ರಾವ್ ಮತ್ತು ಡಾ. ಯಾಸ್ಮೀನ ಬೇಗಂ ನದಾಫ ಇವರು ಎಂ.ಕಾಂ, ಎಂ.ಬಿ.ಎ. ಪಿಹೆಚ್.ಡಿ ವಿದ್ಯಾರ್ಹತೆಯನ್ನು ಹೊಂದಿರುತ್ತಾರೆ. ಮುಖ್ಯವಾಗಿ ಎಂ.ಬಿ.ಎ. ವಿಭಾಗದಲ್ಲಿ ಕಳೆದ 14 ವರ್ಷಗಳಿಂದ ಯಾವುದೇ ಮಹಿಳಾ ಬೋಧಕ ಸಿಬ್ಬಂದಿ ನೇಮಕವಾಗಿಲ್ಲವಾದ್ದರಿಂದ ವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ಈ ಕ್ರಮವನ್ನು ಕೈಗೊಳ್ಳಲಾಗಿದೆ ಎಂದರು.<br>ಡಾ. ಯಾಸ್ಮೀನ ಬೇಗಂ ನದಾಫ ಇವರನ್ನು ಸಭೆಗೆ ಆಹ್ವಾನಿಸಿದಾಗ, ಸದರಿಯವರು ಮೇಲಾಧಿಕಾರಿಗಳ ಸೂಚನೆ/ಆದೇಶಿದ ವಿಭಾಗದಲ್ಲಿ ತಾವು ಕಾರ್ಯನಿರ್ವಹಿಸುವುದಾಗಿ ಹೇಳಿಕೆ ನೀಡಿದರು.<br>ಪ್ರಸ್ತುತ ಪ್ರೊ. ಮಾರುತಿ ರಾವ್ ಇವರ ವರ್ಗಾವಣೆ ಪ್ರಕರಣವು ನ್ಯಾಯಾಲಯದಲ್ಲಿ ಚಾಲ್ತಿ ಇರುವುದರಿಂದ ಸದರಿಯವರ ವರ್ಗಾವಣೆ ಹೊರತುಪಡಿಸಿ ಉಳಿದ ಸಿಬ್ಬಂದಿಗಳ ವರ್ಗಾವಣೆಗೆ ಸಭೆಯು ಅನುಸಮರ್ಥನೆ ನೀಡಿತು.</td></tr>
<tr><td>IV</td><td>2024/12/IV</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಗೀತ ರಚನೆಗಾಗಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಒಂದು ಉಪ ಸಮಿತಿಯನ್ನು ರಚಿಸುವ ಕುರಿತು.</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಉನ್ನತಿ, ಮುಂದಿನ ಭವಿಷ್ಯ ಹಾಗೂ ಹಿಂದಿನ ಘಟನಾವಳಿ ಕುರಿತು ಗೀತ ರೂಪದಲ್ಲಿ ವಿಶೇಷವಾದ ವಿಷಯಗಳನ್ನೊಳಗೊಂಡ ಒಂದು ಗೀತೆಯನ್ನು ರಚಿಸಲು ಈ ಕೆಳಕಾಣಿಸಿದಂತೆ ಸಮಿತಿಯನ್ನು ರಚಿಸಲು ಸಭೆಯು ತೀರ್ಮಾನಿಸಿತು.
<table>
<tr><th>ಸಂ</th><th>ಹೆಸರು</th><th>ಪದನಾಮ</th></tr>
<tr><td>1</td><td>ಡಾ. ಹೆಚ್. ಕಾವೇರಿ</td><td>ಅಧ್ಯಕ್ಷರು</td></tr>
<tr><td>2</td><td>ಶ್ರೀ ಎಸ್. ಎಸ್. ಅಂಗಡಿ</td><td>ಸದಸ್ಯರು</td></tr>
<tr><td>3</td><td>ಶ್ರೀಮತಿ ಶಾರದಾಮಣಿ ಹುಣಶಾಳ</td><td>ಸದಸ್ಯರು</td></tr>
<tr><td>4</td><td>ಶ್ರೀ ಈರಣ್ಣ ಹಪ್ಪಲಿ</td><td>ಸದಸ್ಯರು</td></tr>
<tr><td>5</td><td>ಶ್ರೀ ಎಸ್. ಬಿ. ಉಕ್ಕಲಿ</td><td>ಸದಸ್ಯರು</td></tr>
<tr><td>6</td><td>ಶ್ರೀ ಮಹಾಂತೇಶ ಕಂಬಾರ</td><td>ಸದಸ್ಯರು</td></tr>
<tr><td>7</td><td>ಶ್ರೀ ರಫೀ ಭಂಡಾರಿ</td><td>ಸದಸ್ಯ ಕಾರ್ಯದರ್ಶಿಗಳು</td></tr>
</table></td></tr>
<tr><td>V</td><td>2024/12/V</td><td>ಬೋಧಕ ಸಿಬ್ಬಂದಿಗಳಿಗೆ ಅನ್ಯಕಾರ್ಯ ನಿಮಿತ್ತ ರಜೆ(ಓಓಡಿ), ಕಛೇರಿ ಕೆಲಸ ರಜೆ(ಓಡಿ), ವಿಶೇಷ ಸಾಂದರ್ಭಿಕ ರಜೆ ಮಂಜೂರಾತಿ ಕುರಿತು.</td></tr>
<tr><td></td><td>ತೀರ್ಮಾನ</td><td>ವಿಶ್ವವಿದ್ಯಾಲಯದ ಆಡಳಿತ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಬೋಧಕ ಸಿಬ್ಬಂದಿಗಳಿಗೆ ವರ್ಷಕ್ಕೆ ವಿಶೇಷ ಸಾಂದರ್ಭಿಕ ರಜೆ(SPCL)-20, ಕಛೇರಿ ಕೆಲಸ ರಜೆ(OD)-20 ಒಟ್ಟು 40 ಕ್ಕೆ ನಿಗದಿಪಡಿಸಲು ಹಾಗೂ KPSC/UPSC Exam ಪರೀಕ್ಷಾ ಕಾರ್ಯ ಮತ್ತು ನ್ಯಾಕ್ ಭೇಟಿಯನ್ನು ವರ್ಷಕ್ಕೆ ಒಂದು ಬಾರಿ ಮಾತ್ರ ಮಂಜೂರು ಮಾಡಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.</td></tr>
<tr><td>VI</td><td>2024/12/VI</td><td>2024-25ನೇ ಶೈಕ್ಷಣಿಕ ಸಾಲಿಗಾಗಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ(PG) ಅಧ್ಯಯನ ವಿಭಾಗಗಳಿಗೆ ತಾತ್ಕಾಲಿಕ ಅತಿಥಿ ಉಪನ್ಯಾಸಕರ ನೇಮಕಾತಿಯ ಬಗ್ಗೆ.</td></tr>
</table>

| | | |
|---|---|---|
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣ ಬೆಳಗಾವಿ ಹಾಗೂ ಅಧೀನಕ್ಕೊಳಪಡುವ ಸ್ನಾತಕೋತ್ತರ ಕೇಂದ್ರ, ವಿಜಯಪುರ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯ ಸ್ನಾತಕೋತ್ತರ (PG) ಅಧ್ಯಯನ ವಿಭಾಗಗಳ ವಿವಿಧ ವಿಷಯಗಳಿಗೆ 2024-25ನೇ ಶೈಕ್ಷಣಿಕ ಸಾಲಿಗೆ ಖಾಯಂ ಬೋಧಕ ಸಿಬ್ಬಂದಿಗಳಿಗೆ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಕೆಯಾಗಿರುವ ಹೆಚ್ಚುವರಿ ಬೋಧನಾ ಕಾರ್ಯಭಾರದ ನಿರ್ವಹಣೆಗಾಗಿ ಅಗತ್ಯವಿರುವ 50 ಪೂರ್ಣಕಾಲಿಕ/ಅರೆಕಾಲಿಕ ತಾತ್ಕಾಲಿಕ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲು ತಜ್ಞರನ್ನು ಒಳಗೊಂಡ ಸಮಿತಿಯು ಸಂದರ್ಶನ ನಡೆಸಿ ಸಲ್ಲಿಸಿರುವ ಆಯ್ಕೆ ಪಟ್ಟಿಗೆ ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಸಮರ್ಥನೆ ನೀಡಿತು. |
| VII | 2024/12/VII | ಡಾ. ಬಿ. ಆರ್. ಅಂಬೇಡ್ಕರ್ ಎಜ್ಯುಕೇಶನ್ ಸೊಸೈಟಿಯ ಶ್ರೀ ಸಾಯಿಅಂಜನ್ ರೂರಲ್ ಬಿ.ಬಿ.ಎ ಮಹಾವಿದ್ಯಾಲಯ, ಕಣಬರ್ಗಿ ಮಹಾವಿದ್ಯಾಲಯದವರು ಬಾಕಿ ಉಳಿಸಿಕೊಂಡಿರುವ ಮೊತ್ತವನ್ನು ಭರಿಸಲು ಸಮಯಾವಕಾಶ ಕೋರಿರುವ ಕುರಿತು. |
| | ತೀರ್ಮಾನ | ಡಾ. ಬಿ. ಆರ್. ಅಂಬೇಡ್ಕರ್ ಎಜ್ಯುಕೇಶನ್ ಸೊಸೈಟಿಯ ಶ್ರೀ ಸಾಯಿಅಂಜನ್ ರೂರಲ್ ಬಿ.ಬಿ.ಎ ಮಹಾವಿದ್ಯಾಲಯ, ಕಣಬರ್ಗಿ ಮಹಾವಿದ್ಯಾಲಯದವರು ಬಾಕಿ ಉಳಿಸಿಕೊಂಡಿರುವ ಮೊತ್ತವನ್ನು ಭರಿಸಲು ಸಮಯಾವಕಾಶ ಕೋರಿರುವ ವಿಷಯವನ್ನು ಚರ್ಚಿಸಿದ ಸಭೆಯು ಸದರಿ ಮಹಾವಿದ್ಯಾಲಯದ ಪ್ರಾಚಾರ್ಯರು ಮುಂದಿನ ಸಿಂಡಿಕೇಟ್ ಸಭೆಗೆ ಹಾಜರಾಗಿ ಈ ವಿಷಯದ ಕುರಿತು ವಿವರಣೆಯನ್ನು ನೀಡಲು ಸೂಚಿಸಲು ಸಭೆಯು ತೀರ್ಮಾನಿಸಿತು. |
| VIII | 2024/12/VIII | 2025-26 ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪರಿಶೀಲನೆಗಾಗಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಕುರಿತು. |
| | ತೀರ್ಮಾನ | ಕರ್ನಾಟಕ ಸರ್ಕಾರವು 2025-26ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ ಈಗಾಗಲೇ ಸಂಯೋಜನೆಗೊಂಡಿರುವ ಮಹಾವಿದ್ಯಾಲಯಗಳಿಂದ ಮತ್ತು ಹೊಸ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ವಿವಿಧ ಸಂಘ-ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಅದರಂತೆ ಒಟ್ಟು 315 ಮಹಾವಿದ್ಯಾಲಯಗಳು ಸಂಯೋಜನೆಗಾಗಿ ಅರ್ಜಿಗಳನ್ನು ಹಾಗೂ 8 ಹೊಸ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಕೋರಿಕೆ ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000, ಪ್ರಕರಣ 49(06) ರನ್ವಯ ರಚಿಸಲಾದ "ಸ್ಥಳೀಯ ತನಿಖಾ ಸಮಿತಿ"ಗಳನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು ಹಾಗೂ ಸಮಿತಿಗಳಿಗೆ ನಿಯಮಾನುಸಾರ ಪ್ರತಿ ಮಹಾವಿದ್ಯಾಲಯದಂತೆ ಗೌರವಧನ, ದಿನಭತ್ಯೆ/ಪ್ರಯಾಣ ಭತ್ಯೆ, ವಾಹನ ವ್ಯವಸ್ಥೆಯನ್ನು ಕಲ್ಪಿಸಲು ಅನುಮೋದನೆ ನೀಡಿತು. |
| IX | 2024/12/IX | 2025-26 ನೇ ಸಾಲಿನ ಸಂಯೋಜನೆಗಾಗಿ ನಿಗದಿಪಡಿಸಿದ ಸಂಯೋಜನಾ ಶುಲ್ಕ ಮತ್ತು ಇತರೆ ಪರಿಷ್ಕೃತ ಶುಲ್ಕಗಳನ್ನು ಅನುಷ್ಠಾನಗೊಳಿಸಲು ಸಿಂಡಿಕೇಟ್ ಸಭೆಯ ಅನುಸಮರ್ಥನೆ ಕುರಿತು |
| | ತೀರ್ಮಾನ | 2025-26 ನೇ ಸಾಲಿನ ಸಂಯೋಜನೆಗಾಗಿ ನಿಗದಿಪಡಿಸಿದ ಸಂಯೋಜನಾ ಶುಲ್ಕ ಮತ್ತು ಇತರೆ ಪರಿಷ್ಕೃತ ಶುಲ್ಕಗಳಿಗೆ ಸಂಬಂಧಿಸಿದಂತೆ, 2024-25ನೇ ಸಾಲಿನ ಶುಲ್ಕಗಳಲ್ಲಿ ಸಂಯೋಜನಾ ಶುಲ್ಕವನ್ನು ಶೇ. 10 ರಷ್ಟು ಹೆಚ್ಚಿಸಿ ಪರಿಷ್ಕರಿಸಲಾಗಿದ್ದು, ಸದರಿ ಶುಲ್ಕಗಳ ಅನುಷ್ಠಾನಕ್ಕಾಗಿ ಸಿಂಡಿಕೇಟ್ ಸಭೆಯು ಅನುಸಮರ್ಥನೆ ನೀಡಿತು. |
| X | 2024/12/X | ಅಂತರಶಿಸ್ತಿನ ಅಧ್ಯಯನ ಅಡಿಯಲ್ಲಿ ಶ್ರೀ ಸವದತ್ತಿ ಯಲ್ಲಮ್ಮ ದೇವಸ್ಥಾನದ ಅಧ್ಯಯನ ಕುರಿತು |
| | ತೀರ್ಮಾನ | ಶ್ರೀ ಸವದತ್ತಿ ಯಲ್ಲಮ್ಮ ದೇವಸ್ಥಾನದ ನಿರ್ವಹಣಾ ಅಧಿಕಾರಿಗಳು ಶ್ರೀ ಸವದತ್ತಿ ಯಲ್ಲಮ್ಮ ದೇವಸ್ಥಾನದ ಹಿನ್ನೆಲೆ, ಇತಿಹಾಸ, ಉಗಮ ರೇಣುಕಾದೇವಿ, ಪರಶುರಾಮ್, ಜಮದಗ್ನಿ ಕುರಿತಾಗಿ ಅಧ್ಯಯನ ನಡೆಸಲು ವಿಶ್ವವಿದ್ಯಾಲಯಕ್ಕೆ ಮನವಿ ಮಾಡಿರುತ್ತಾರೆ. ಕಾರಣ, ಅಂತರಶಿಸ್ತಿನ ಅಧ್ಯಯನ ಅಡಿಯಲ್ಲಿ ವಿಶ್ವವಿದ್ಯಾಲಯದ ಕನ್ನಡ, ಇಂಗ್ಲೀಷ, ಇತಿಹಾಸ, ಸಮಾಜಶಾಸ್ತ್ರ, ಸಮಾಜಕಾರ್ಯ ವಿಭಾಗಗಳ ಆಸಕ್ತ ಬೋಧಕ ಸಿಬ್ಬಂದಿಗಳು ಮತ್ತು ಬಾಹ್ಯ ಸದಸ್ಯರ ಒಳಗೊಂಡು ಒಂದು ಸಮಿತಿ ರಚಿಸಿ, ಸದರಿ ಸಮಿತಿಯು ದೇವಸ್ಥಾನದ ಕುರಿತಾಗಿ ಸಂಶೋಧನಾ ನಡೆಸಿ ವರದಿಯನ್ನು ಸಿದ್ಧಪಡಿಸಲು ಸಭೆಯು ಅನುಮೋದನೆ ನೀಡಿತು. |
| XI | 2024/12/XI | ಪ್ರೊ. ಎಂ.ಸಿ. ಎರಿಸ್ವಾಮಿ, ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನ ಭಾರತೀಯ ಶಿಕ್ಷಣ ವಿಭಾಗಕ್ಕೆ ವರ್ಗಾವಣೆಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವುದರ ಕುರಿತು |

| | | |
|---|---|---|
| | ತೀರ್ಮಾನ | ಪ್ರೊ. ಎಂ.ಸಿ. ಎರ್ರಿಸ್ವಾಮಿ, ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಗೆ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನ ಭಾರತೀಯ ಶಿಕ್ಷಣ ವಿಭಾಗದಲ್ಲಿ ಖಾಲಿ ಇರುವ ಪ್ರಾಧ್ಯಾಪಕರ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಪ್ರಕರಣ 58 ರನ್ವಯ ಹುದ್ದೆ ರಹಿತವಾಗಿ ಅಂತರ್ ವಿಶ್ವವಿದ್ಯಾಲಯಗಳ ವರ್ಗಾವಣೆಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲಾಗಿದೆ. ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು. |
| XII | 2024/12/XII | ವಿಶ್ವವಿದ್ಯಾಲಯದಲ್ಲಿ SC/ST Griveance Cell ರಚಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹಿತದೃಷ್ಟಿಯಿಂದ ಈ ಕೆಳಕಾಣಿಸಿದಂತೆ SC/ST Griveance Cell ರಚಿಸಲು ಸಭೆಯು ತೀರ್ಮಾನಿಸಿತು. |

| ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ರವೀಂದ್ರ ನಾಯ್ಕರ | ಅಧ್ಯಕ್ಷರು |
| 2 | ಡಾ. ಹೆಚ್. ಕಾವೇರಿ | ಸದಸ್ಯರು |
| 3 | ಪ್ರೊ. ವಾಯ್. ಎಸ್. ಬಲವಂತಗೋಳ | ಸದಸ್ಯರು |
| 4 | ಶ್ರೀ ವಿನೀತ ಜೋಷಿ | ಸದಸ್ಯರು |
| 5 | ಡಾ. ಡಿ. ಕೆ. ಕಾಂಬಳೆ | ಸದಸ್ಯ ಕಾರ್ಯದರ್ಶಿಗಳು |

| | | |
|---|---|---|
| XIII | 2024/12/XIII | RUCTA ಸಮಿತಿ ಸಲ್ಲಿಸಿರುವ ಪತ್ರಗಳ ಕುರಿತು |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಸರ್ಕಾರದ ಆದೇಶನುಸಾರ ಏಕರೂಪ ಪ್ರವೇಶಾತಿ ಶುಲ್ಕ ಮತ್ತು ಸಂಭಾವಣೆಯನ್ನು ಜಾರಿಗೊಳಿಸಲಾಗಿದೆ. ಪ್ರಸ್ತುತ RUCTA ಸಮಿತಿ ಇವರ ಮನವಿ ಪತ್ರದಲ್ಲಿ ಯುಜಿಸಿ ವೇತನ ಪಡೆಯುತ್ತಿರುವ ಪ್ರಾಚಾರ್ಯರು, ಮುಖ್ಯ ಅಧೀಕ್ಷಕರಾಗಿ ಅದೇ ಮಹಾವಿದ್ಯಾಲಯದಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸಿದ್ದಲ್ಲಿ ಹಾಗೂ ಅದೇ ಮಹಾವಿದ್ಯಾಲಯದ ಯುಜಿಸಿ ವೇತನ ಪಡೆಯುತ್ತಿರುವ ಅಧ್ಯಾಪಕರ ಕೊಠಡಿ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸಿದ್ದಲ್ಲಿ ಅವರಿಗೆ ಸಂಭಾವನೆ ನೀಡಲು ತಿಳಿಸಿರುತ್ತಾರೆ. ಆದರೆ ಮಹಾವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುವ ಯುಜಿಸಿ ವೇತನ ಪಡೆಯುತ್ತಿರುವ ಅಧ್ಯಾಪಕರಿಗೆ ಸಂಭಾವನೆ ನೀಡಲು ಅವಕಾಶವಿರುವುದಿಲ್ಲ ಹಾಗೂ ಈ ಕುರಿತಾಗಿ ಈಗಾಗಲೇ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಅದಗ್ಯೂ ಸದರಿ ಸಮಿತಿಯ ಅಧ್ಯಕ್ಷರು ದಿನಪತ್ರಿಕೆಗಳಲ್ಲಿ ವಿಶ್ವವಿದ್ಯಾಲಯ ಮತ್ತು ಅಧಿಕಾರಿಗಳ ಘನತೆಗೆ ಧಕ್ಕೆ ತರುವ ಹೇಳಿಕೆಗಳನ್ನು ನೀಡಿದ್ದಾರೆ ಮತ್ತು ಈ ಕುರಿತಾಗಿ ಘನತೆವೆತ್ತ ರಾಜ್ಯಪಾಲರು, ಮಾನ್ಯ ಉನ್ನತ ಶಿಕ್ಷಣ ಸಚಿವರು, ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ, ಬೆಂಗಳೂರು ಇವರುಗಳಿಗೆ ಪತ್ರ ಕೂಡ ಬರೆದಿದ್ದಾರೆ ಎಂದು ದಾಖಲಾತಿಗಳನ್ನು ಕುಲಸಚಿವರು(ಮೌಲ್ಯಮಾಪನ) ಇವರು ಸಭೆಗೆ ಪ್ರಸ್ತುತ ಪಡಿಸಿದರು.<br>ದಾಖಲಾತಿಗಳನ್ನು ಪರಿಶೀಲಿಸಿ ವಿಶ್ವವಿದ್ಯಾಲಯ ಮತ್ತು ಅಧಿಕಾರಿಗಳ ಘನತೆಗೆ ಧಕ್ಕೆ ತರುವ ಹೇಳಿಕೆಗಳು ಮತ್ತು ಅವಾಚ್ಯ ಶಬ್ದಗಳನ್ನು ಉಪಯೋಗಿಸಿರುವುದನ್ನು ಗಂಭೀರವಾಗಿ ಪರಿಗಣಿಸಿದ ಸಭೆಯು ಈ ಕುರಿತಾಗಿ Legal Notice ಜಾರಿ ಮಾಡಲು ಮತ್ತು ತನಿಖೆ ನಡೆಸಲು ಈ ಕೆಳಕಾಣಿಸಿದಂತೆ ಸಮಿತಿಯನ್ನು ರಚಿಸಲು ತೀರ್ಮಾನಿಸಿತು. |

| ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ರವೀಂದ್ರ ನಾಯ್ಕರ | ಅಧ್ಯಕ್ಷರು |
| 2 | ಡಾ. ಎಸ್. ಎ. ಪತಂಗಿ | ಸದಸ್ಯರು |
| 3 | ಶ್ರೀ ಮಹಾಂತೇಶ ಕಂಬಾರ | ಸದಸ್ಯರು |
| 4 | ಡಾ. ಎಸ್. ಬಿ. ಉಕಲಿ | ಸದಸ್ಯರು |
| 5 | ಪ್ರೊ. ರವೀಂದ್ರನಾಥ ಕದಮ್ | ಸದಸ್ಯ ಕಾರ್ಯದರ್ಶಿಗಳು |

| | | |
|---|---|---|
| XIV | 2024/12/XIV | ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳ ಭರ್ತಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸುವ ಕುರಿತು. |
| | ತೀರ್ಮಾನ | ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ ಖಾಲಿ ಇರುವ ವಿವಿಧ ವೃಂದದ 94 ಹುದ್ದೆಗಳನ್ನು ನೇರನೇಮಕಾತಿ ಮಾಡಲು ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ಮೌಲ್ಯಮಾಪನವನ್ನು 2020 ರ ಸುತ್ತೋಲೆಯನ್ವಯ 9.3.2024 ರಂದು ಮಾನ್ಯ ಕುಲಪತಿಗಳ ನಿರ್ದೇಶನದಂತೆ ನಡೆಸುವುದಾಗಿ ಸದರಿ ಬ್ಯಾಂಕ್‌ಗೆ ಒಪ್ಪಿಗೆ ಪತ್ರ ಹಾಗೂ ದಿನಾಂಕ: 13.05.2024 ರಂದು ಅಂದಾಜು ವೆಚ್ಚದ ಮಾಹಿತಿ ನೀಡಲಾಗಿತ್ತು. ಆದರೆ, ಪ್ರಶ್ನೆ ಪತ್ರಿಕೆಗಳನ್ನು ತಯಾರಿಸಲು ಅರ್ಹ ತಜ್ಞರು ಲಭ್ಯವಿಲ್ಲವಾದ |

| | | |
|---|---|---|
| | | ಹಾಗೂ ಕೆಲಸದ ಒತ್ತಡದಿಂದಾಗಿ ಪರೀಕ್ಷೆ ನಡೆಸಲು ಸಾಧ್ಯವಿಲ್ಲವೆಂದು ದೂರವಾಣಿ ಮೂಲಕ ತಿಳಿಸಲಾಗಿದೆ. ಆದಾಗ್ಯೂ ಬ್ಯಾಂಕಿನವರು ರಾಚವಿವಿ ಯ ಪತ್ರ ಸಂಖ್ಯೆ:ರಾಚವಿ:ಕುಕಾಶಿ:ಬೆಳಗಾವಿ 2024-25 ನಂ 102 ದಿನಾಂಕ: 21.10.2024 ರಂದು ಬ್ಯಾಂಕಿಗೆ ಪತ್ರ ಬರೆದಿದ್ದಾರೆ, ಅಲ್ಲದೇ ದೂರವಾಣಿ ಮೂಲಕ ಮಾನ್ಯ Principal Secretary ಇವರಿಗೆ ಪತ್ರ ಬರೆದು ಪರೀಕ್ಷೆಗಳನ್ನು ನಡೆಸಲು ಅನುಮತಿ ಕೇಳಿ ಪತ್ರ ಬರೆಯಲು ಕೋರಿದ್ದಾರೆ ಹಾಗೂ ದಿನಾಂಕ: 30.11.2024 ಹಾಗೂ 1.12.2024 ರಂದು ಪರೀಕ್ಷೆ ನಡೆಸಲು ದಿನಾಂಕ ನಿಗದಿ ಮಾಡಿರುವುದಾಗಿ ದಿನಾಂಕ: 29.10.2024 ರಂದು ಸದರಿ ಬ್ಯಾಂಕಿನ್ ಅಧಿಕಾರಿಗಳು ಸರ್ಕಾರಕ್ಕೆ ಪತ್ರ ಬರೆದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಖಾಲಿ ಇರುವ ವಿವಿಧ ವೃಂದದ ನೇರನೇಮಕಾತಿ ಮಾಡಲು ಲಿಖಿತ ಪರೀಕ್ಷೆ ಮೌಲ್ಯಮಾಪನ ನಡೆಸಲು ಅನುಮತಿ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಕುರಿತಾಗಿ ಸರಕಾರದಿಂದ ಬಂದಿರುವ ಪತ್ರವನ್ನು ಉಲ್ಲೇಖಿಸಿ ಕುಲಸಚಿವರ ಕಾರ್ಯಾಲಯದವರು "ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ರಾಜ್ಯ ಸರ್ಕಾರದ ಪೂರ್ವಾನುಮತಿಯನ್ನು ಪಡೆಯದೇ ಭಾಗವಹಿಸಿರುವುದನ್ನು ಗಂಭೀರವಾಗಿ ಪರಿಗಣಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ-2000 ಹಾಗೂ ಸರ್ಕಾರದ ಸುತ್ತೋಲೆ ಸಂ:ಇಡಿ 454ಯುಬಿವಿ 2024 ದಿನಾಂಕ: 3.10.2024 ರನ್ವಯ ನಿಯಮಾನುಸಾರ ಕ್ರಮವಹಿಸುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಮಾಹಿತಿ ಕೊಡಲು ಕುಲಸಚಿವರು ಮೌಲ್ಯಮಾಪನರವರಿಗೆ ಪತ್ರ ಬರೆದಿದ್ದಾರೆಂಬ ಮಾಹಿತಿಯನ್ನು ಸಭೆಗೆ ನೀಡಿದರು. ಈ ಹಿನ್ನೆಲೆಯಲ್ಲಿ, ಕುಲಸಚಿವರು ಮೌಲ್ಯಮಾಪನರವರು ರಾಚವಿ:ಕುಕಾಶಿ:ಬೆಳಗಾವಿ:2024-25 ನಂ 102 ದಿನಾಂಕ: 21.10.2024 ರಂದು ಪರೀಕ್ಷಾ ವಿಭಾಗದಿಂದ ಮಂಡ್ಯ ಡಿಸಿಸಿ ಬ್ಯಾಂಕ್‌ಗೆ ಪತ್ರ ಬರೆದಿರುವುದಿಲ್ಲ ಹಾಗೂ ಸದರಿ ಬ್ಯಾಂಕಿಗೆ ದೂರವಾಣಿ ಮೂಲಕ ಪರೀಕ್ಷೆಗಳ ದಿನಾಂಕ ನಿಗದಿ ಅಥವಾ ಸರ್ಕಾರಕ್ಕೆ ಪತ್ರ ಬರೆಯಲು ಕೋರಿರುವುದಿಲ್ಲ. ಸದರಿ ಪತ್ರಕ್ಕೂ ತಮಗೆ ಹಾಗೂ ತಮ್ಮ ಕಛೇರಿಗೂ ಸಂಬಂಧವಿಲ್ಲವೆಂದು ಮಾಹಿತಿ ನೀಡಿದರು. ಸದರಿ ವಿಷಯದ ಕುರಿತು ಮಾನ್ಯ ಕುಲಪತಿಗಳು ಮಾತನಾಡಿ ಪತ್ರ ಸಂ: ರಾಚವಿ:ಕುಕಾಶಿ:ಬೆಳಗಾವಿ:2024-25 ನಂ 102 ದಿನಾಂಕ: 21.10.2024 ರಂದು ಕುಲಪತಿಗಳ ಕಾರ್ಯಾಲಯದವರಿಂದ ಅವರೇ ಪತ್ರ ಬರೆದಿರುವುದಾಗಿ ಸಭೆಗೆ ತಿಳಿಸಿದರು. ಈ ವಿಚಾರವಾಗಿ ಕುಲಪತಿಗಳು ಅವರ ಕಚೇರಿಯಿಂದ ಪತ್ರ ಬರೆಯುವುದಾಗಿ ಸಭೆಗೆ ತಿಳಿಸಿದರು. |

ಕೊನೆಯದಾಗಿ, ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,

<u>ಪ್ರತಿ ಮಾಹಿತಿಗಾಗಿ :</u> ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B + ಗ್ರೇಡ್ – 2021)

Azadi Ka Amrit Mahotsav

# RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade - 2021)

E-mail:rcuregistrar@gmail.com
registrar@rcub.ac.in

ಕುಲಸಚಿವರ ಕಾರ್ಯಾಲಯ

Office of the Registrar

Website:www.rcub.ac.in
Phone No.: 0831-2565203/34

ಕ್ರ.ಸಂ.: ರಾಚವಿಬೆ/ಕುಸಕಾ/ಜಿಎಡಿ/ಸಿಂಡಿಕೇಟ್/೨೦೨೪-೨೫/4750 ದಿನಾಂಕ: 23 DEC 2024

ಮಾನ್ಯ ಸಿಂಡಿಕೇಟ್ ಸದಸ್ಯರೆ,

ವಿಷಯ : ದಿನಾಂಕ : 06-12-2024 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಯ ಪ್ರತಿಯನ್ನು ಕಳುಹಿಸುವ ಕುರಿತು.

ಉಲ್ಲೇಖ: ಸಿಂಡಿಕೇಟ್ ಸಭ ನಡೆದ ದಿನಾಂಕ : 06-12-2024

ದಿನಾಂಕ : 06-12-2024 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಾಡಿರುವ ಚರ್ಚೆ ಮತ್ತು ಕೈಕೊಳ್ಳಲಾಗಿರುವ ನಿರ್ಣಯಗಳ ಪ್ರತಿಯನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಮತ್ತು ಧೃಡೀಕರಣಕ್ಕಾಗಿ ಕಳಸುತ್ತಿದ್ದೇನೆ. ಇದರಲ್ಲಿರುವ ಯಾವುದೇ ವಿಷಯಗಳ ಬಗ್ಗೆ ತಮ್ಮ ಸಹಮತಿ ಇಲ್ಲದಿದ್ದಲ್ಲಿ ಲಿಖಿತವಾಗಿ ಅಗತ್ಯ ಟಿಪ್ಪಣಿಗಳೊಂದಿಗೆ ದಿನಾಂಕ : 26-12-2024ರ ಒಳಗೆ ವಿಶ್ವವಿದ್ಯಾಲಯಕ್ಕೆ ಇ-ಮೇಲ್ ಮುಖಾಂತರ ತಿಳಸಲು ವಿನಂತಿಸಲಾಗಿದೆ.

ತಮ್ಮ ಲಿಖಿತ ಅಭಿಪ್ರಾಯ ಬಾರದಿದ್ದಲ್ಲಿ ಇಲ್ಲಿನ ವಿಷಯಗಳಿಗೆ ತಮ್ಮ ಧೃಡೀಕರಣ ಇದೆಯೆಂದು ಭಾವಿಸಲಾಗುವುದು.

ವಂದನೆಗಳು.

ತಮ್ಮ ವಿಶ್ವಾಸಿ,

(ಸಂತೋಷ ಕಾಮಗೌಡ ಕೆ.ಎ.ಎಸ್.(ಹಿರಿಯ ಶ್ರೇಣಿ))
ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ